## ಅಧ್ಯಾಯ ೨
## ಇತಿಹಾಸ

ನಾಡಿನ ಇತಿಹಾಸದಲ್ಲಿ ಮೈಸೂರು ಜಿಲ್ಲೆಗೆ ವಿಶಿಷ್ಟ ಸ್ಥಾನವಿದ್ದು, ಜಿಲ್ಲೆಯ ಇತಿಹಾಸದಲ್ಲಿ ತಿರುಮಕೂಡಲು ನರಸೀಪುರ ತಾಲೂಕಿನ ಪಾತ್ರ ಹಿರಿದಾಗಿದೆ. ಇತಿಹಾಸಪೂರ್ವ ಕಾಲಕ್ಕೆ ಸಂಬಂಧಿಸಿದಂತೆ ತಾಲೂಕಿನ ನರಸೀಪುರ, ಹೆಮ್ಮಿಗೆ, ಮುತ್ತಲವಾಡಿ ಹಾಗೂ ತಲಕಾಡುಗಳಲ್ಲಿ ಪತ್ತೆಯಾಗಿರುವ ಮಾನವ ವಸತಿನೆಲೆಗಳು ಮಹತ್ವದ್ದಾಗಿದ್ದು, ಉತ್ಖನನಗಳೂ ನಡೆದು ಮಹತ್ವದ ಅಂಶಗಳು ಬೆಳಕು ಕಂಡಿವೆ. ರಾಜ್ಯದಲ್ಲೇ ಅತ್ಯಂತ ಹೆಚ್ಚು ಶಾಸನಗಳನ್ನು ಹೊಂದಿರುವ ಕೆಲವೇ ತಾಲೂಕುಗಳಲ್ಲಿ ನರಸೀಪುರವೂ ಒಂದಾಗಿದ್ದು, ಇಲ್ಲಿಂದ ಈವರೆಗೆ ತಲಕಾಡಿನ ಗಂಗರು, ತಂಜಾವೂರಿನ ಚೋಳರು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರದರಸರು, ಮೈಸೂರರಸರು, ಹೈದರ್–ಟಿಪ್ಪು, ಸ್ಥಳೀಯ ಸಾಮಂತರಾದ ಮೂಗೂರು, ಕಳಲೆ ಹಾಗೂ ಉಮ್ಮತ್ತೂರು ಪ್ರಭುಗಳು, ಕಮೀಷನರು, ದಿವಾನರುಗಳ ಆಡಳಿತಾವಧಿಗೆ ಸೇರಿದ ಸುಮಾರು ೩೨೫ ಶಾಸನಗಳು ವರದಿಯಾಗಿವೆ. ಇವುಗಳ ನೆರವಿನಿಂದ ಆಯಾ ಕಾಲದ ಸಾಂಸ್ಕೃತಿಕ ಚಿತ್ರಣವನ್ನು ಪಡೆಯಬಹುದಾಗಿದೆ. ರಾಜ್ಯದಲ್ಲಿ ಲಭ್ಯವಿರುವ ಶಾಸನಗಳಲ್ಲೇ ತಿ.ನರಸೀಪುರದ ೧೭೪೯ರ ತಾಮ್ರಶಾಸನವು ಅತಿ ದೀರ್ಘ ಶಾಸನವಾಗಿದೆ. ಒಟ್ಟು ೧೩೯೦ ಸಾಲುಗಳನ್ನುಳ್ಳ ಈ ಶಾಸನವನ್ನು ತಲಾ ೪೫ ಸಾಲುಗಳನ್ನುಳ್ಳ ೧೬ ತಾಮ್ರದ ಹಲಗೆಗಳ ಮೇಲೆ ಕನ್ನಡಭಾಷೆ ಹಾಗೂ ನಾಗರಿಲಿಪಿಯಲ್ಲಿ ರಚಿಸಲಾಗಿದೆ. ಈ ಶಾಸನದಲ್ಲಿ ಮೈಸೂರು ಹಾಗೂ ಕಳಲೆ ಪ್ರಭುಗಳ ವಿವರವಾದ ವಂಶಾವಳಿ ಲಭಿಸುತ್ತದೆ. ಸ್ವಾತಂತ್ರ್ಯ ಚಳವಳಿಯಲ್ಲೂ ತಾಲೂಕಿನ ಪಾತ್ರವಿದ್ದು, ಸ್ವಾತಂತ್ರ್ಯಾ ನಂತರದಲ್ಲಿ ಪ್ರಗತಿಪಥದಲ್ಲಿ ಈ ತಾಲೂಕು ಮುನ್ನಡೆಯುವ ಮೂಲಕ ವಿವಿಧ ರಂಗಗಳಲ್ಲಿ ಬೆಳವಣಿಗೆಯನ್ನು ಸಾಧಿಸುತ್ತಿರುವುದು ಗಮನಾರ್ಹವಾಗಿದೆ.

**ಇತಿಹಾಸಪೂರ್ವ ಕಾಲದ ಶಿಲಾಯುಧ ಸಂಸ್ಕೃತಿ :** ಶಿಲಾಯುಧಗಳನ್ನೇ ಬಳಸುತ್ತಿದ್ದ ಶಿಲಾಯುಗದ ಮಾನವರ ಪ್ರಾಚೀನತೆಯನ್ನು ಜಿಲ್ಲೆಯಲ್ಲಿ ಆದಿಹಳೆಶಿಲಾಯುಗದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಈ ಸಂಸ್ಕೃತಿಗೆ ಸಂಬಂಧಿಸಿದ ಏಕೈಕ ನೆಲೆಯನ್ನು ನೆರೆಯ ನಂಜನಗೂಡು ತಾಲೂಕಿನ ಹೆಬ್ಯ ಗ್ರಾಮದ ಬಳಿ ಪುರಾತತ್ವಜ್ಞರು ೧೯೬೪ರಷ್ಟು



ಹಿಂದೆಯೇ ಪತ್ತೆಹಚ್ಚಿದ್ದಾರೆ. ಆ ನೆಲೆಯಲ್ಲಿ ಆದಿಹಳೆಶಿಲಾಯುಗಕ್ಕೆ ಸೇರಿದ ಕೈಗೊಡಲಿಯೂ ಪತ್ತೆಯಾಗಿದೆ. ಆದರೆ ಕಳೆದ ಶತಮಾನದಲ್ಲೇ ಭಾರತೀಯ ಪ್ರಾಗಿತಿಹಾಸ ಕ್ಷೇತ್ರದ ಪಿತಾಮಹಾನೆಂದೇ ಪರಿಗಣಿಸಲ್ಪಟ್ಟಿರುವ ರಾಬರ್ಟ್ ಬ್ರೂಸ್‌ಫೂಟ್, ತಿ.ನರಸೀಪುರದ ನೆಲೆಯನ್ನು (೧೯೧೬) ಶೋಧಿಸಿ ವರದಿ ಮಾಡಿದ್ದು ಮಹತ್ವದ ಬೆಳವಣಿಗೆಯಾಗಿತ್ತು. ಇದು ನವಶಿಲಾಯುಗದಷ್ಟು ಪ್ರಾಚೀನ ಅವಶೇಷಗಳನ್ನು ಒಳಗೊಂಡಿದ್ದರೂ, ಅದರ ಉತ್ಖನನ ನಡೆದದ್ದು, ೧೯೫೯–೬೫ರ ಅವಧಿಯಲ್ಲಿ. ಆದರೆ ಅದಕ್ಕೂ ಹಿಂದಿನ ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿಯೊಂದಿಗೆ ತಿ.ನರಸೀಪುರ ತಾಲೂಕಿನಲ್ಲಿ ಇತಿಹಾಸಪೂರ್ವ ಕಾಲದ ಮಾನವ ಚಟುವಟಿಕೆಯ ಕುರುಹುಗಳು ಲಭಿಸಲಾರಂಭಿಸುತ್ತದೆ. (ಸುಮಾರು ಕ್ರಿ.ಪೂ. ೪೦,೦೦೦–೧೦,೦೦೦) ಈ ಸಂಸ್ಕೃತಿಗೆ ಸೇರಿದ ವಿವಿಧ ಶಿಲಾಯುಧಗಳು ಕಾವೇರಿ ಬಲದಂಡೆಯಲ್ಲಿರುವ ಹೆಮ್ಮಿಗೆಯಲ್ಲಿ ದೊರೆತಿವೆ. ೧೯೬೩–೬೪ರಲ್ಲಿ ರಾಜ್ಯದಲ್ಲಿ ಜರುಗಿದ ಪುರಾತತ್ವ ಸರ್ವೇಕ್ಷಣದ ಸಂದರ್ಭದಲ್ಲಿ ಬೆಳಕಿಗೆ ಬಂದ ಈ ನೆಲೆಯಲ್ಲಿ ಪುರಾತತ್ವಜ್ಞರಾದ ಎಂ.ಹನುಮಂತರಾವ್ ಹಾಗೂ ಡಾ. ಎಸ್. ನಾಗರಾಜು ೧೯೭೪ರಲ್ಲಿ ಉತ್ಖನನ ನಡೆಸಿ ವರದಿಯನ್ನೂ ಪ್ರಕಟಿಸಿದ್ದಾರೆ. ಈ ನೆಲೆಯಲ್ಲಿ ಮಧ್ಯಶಿಲಾಯುಗ ಸಂಸ್ಕೃತಿಯ ಅವಶೇಷಗಳೊಂದಿಗೆ ಸೂಕ್ಷ್ಮ ಶಿಲಾಯುಗ (ಕ್ರಿ.ಪೂ.೧೦,೦೦೦–೨,೫೦೦), ನೂತನ ಶಿಲಾಯುಗ (ಕ್ರಿ.ಪೂ.೨,೫೦೦–೧೦೦೦), ಶಿಲಾ–ತಾಮ್ರಯುಗ (ಕ್ರಿ.ಪೂ.೧೩೦೦–೮೦೦) ಹಾಗೂ ಇತಿಹಾಸಾರಂಭಕಾಲಕ್ಕೆ ಸಂಬಂಧಿಸಿದ ವಿವಿಧ ಉಪಕರಣಗಳು, ವಿವಿಧ ಬಗೆಯ ಮಡಕೆಯ ತುಣುಕುಗಳು, ತಾಮ್ರದ ಉಪಕರಣಗಳೂ ಲಭಿಸಿವೆ. ಬನ್ನೂರಿನಲ್ಲೂ ಶಿಲಾತಾಮ್ರಯುಗ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗಿವೆ. ತಾಲೂಕಿನಲ್ಲಿ ಇತಿಹಾಸಪೂರ್ವ ಕಾಲದ ಮಾನವ ಚಟುವಟಿಕೆಯು ನೂತನ ಶಿಲಾಯುಗ ಸಂಸ್ಕೃತಿಯೊಂದಿಗೆ ದೊಡ್ಡ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂದ ಅಂಶವು ತಾಲೂಕಿನ ತಿ.ನರಸೀಪುರ, ಬೆನಕನಹಳ್ಳಿ ಹೆಮ್ಮಿಗೆ ಮುತ್ತಲವಾಡಿ ಹಾಗೂ ತಲಕಾಡು ನಿವೇಶನಗಳಲ್ಲಿ ಲಭಿಸಿರುವ ಅವಶೇಷಗಳಿಂದ ಸ್ಪಷ್ಟವಾಗುತ್ತದೆ. ಈ ಐದು ನೆಲೆಗಳಲ್ಲಿ ತಿ.ನರಸೀಪುರದ ಆಚೆ ದಡದಲ್ಲಿರುವ ಬೆನಕನಹಳ್ಳಿ ನಿವೇಶನದ ಉತ್ಖನನವನ್ನು ಕೈಗೊಂಡಿದ್ದ ಎಂ.ಶೇಷಾದ್ರಿಯವರು ಉತ್ಖನನದ ವರದಿಯನ್ನು ೧೯೭೧ರಲ್ಲಿ ಪ್ರಕಟಿಸಿದ್ದಾರೆ. ಹೆಮ್ಮಿಗೆ ಉತ್ಖನನದ ವರದಿಯೂ ೧೯೭೪ರಲ್ಲಿ ಪ್ರಕಟವಾಗಿದೆ. ಮುತ್ತಲವಾಡಿ ನೆಲೆಯ ಉತ್ಖನನವನ್ನೂ ಪುರಾತತ್ವಜ್ಞರು ಬಹಳ ಹಿಂದೆಯೇ ಪೂರ್ಣಗೊಳಿಸಿದ್ದು, ತಲಕಾಡು ನಿವೇಶನದ ಉತ್ಖನನವನ್ನು ೧೯೯೩–೯೪ರಲ್ಲಿ ನಡೆಸಿ ವರದಿಯನ್ನೂ ಪ್ರಕಟಿಸಲಾಗಿದೆ. ಈ ಎಲ್ಲಾ ನೆಲೆಗಳ ಉತ್ಖನನದಿಂದಾಗಿ, ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ.

ನರಸೀಪುರದ ಆಚೆ ದಡದಲ್ಲಿರುವ ಬೆನಕನಹಳ್ಳಿಯ ನಿವೇಶನವು ಈ ಸಂಸ್ಕೃತಿಗೆ ಸೇರಿದ ವಸತಿನೆಲೆಯಾಗಿದ್ದು, ವಿವಿಧ ಬಗೆಯ ಶಿಲಾಯುಧ, ಮಡಕೆಯ ಮಾದರಿ ಹಾಗೂ ವಿಶಿಷ್ಟ ಆಕಾರದ ತಲೆಯಾನಿಕೆಗಳು ಲಭಿಸಿವೆ. ತಲಕಾಡು ಹಾಗೂ ಹೆಮ್ಮಿಗೆಯ ನೆಲೆಗಳಲ್ಲೂ ಈ ಸಂಸ್ಕೃತಿಗೆ ಸೇರಿದ ಜನರು ಬಳಸುತ್ತಿದ್ದ ಬಗೆಬಗೆಯ ಮಡಕೆಯ

ತುಣುಕುಗಳು ಹೇರಳವಾಗಿ ದೊರೆತಿವೆ. ಮಿಗಿಲಾಗಿ ಕಪ್ಪುಬಣ್ಣದಿಂದ ಸಿಂಗರಿಸಿದ ಕೆಂಪುವರ್ಣದ ಮಡಕೆ, ಸಮಾನಾಂತರ ಅಲಗುಳ್ಳ ಶಿಲಾ ಅಲಗು, ಚರ್ಟ್‌ಯುಕ್ತ ತಿರುಳ್ಗಲ್ಲು, ಹೊಳಪುಳ್ಳ ಕೊಡಲಿ, ಬೂದುಬಣ್ಣದ ಒರಟು ಕುಂಭ ಹಾಗೂ ಪ್ರಾಣಿಗಳ ಮೂಳೆಗಳೂ ಇಲ್ಲಿ ಹೇರಳವಾಗಿ ಲಭಿಸಿವೆ. ಈ ವಸತಿನೆಲೆಯ ಸಮಾಧಿಯೊಂದರಲ್ಲಿ ತಲೆದಿಂಬಿನಾಕಾರದ ಇಟ್ಟಿಗೆಯೂ ಲಭಿಸಿದೆ. ಎಮ್ಮೆಯೊಂದರ ಮೂಳೆಯ ಪಳಿಯುಳಿಕೆಯೂ ಪತ್ತೆಯಾಗಿದೆ. ಅಲ್ಲದೇ ಇಲ್ಲಿ ದೊರೆತಿರುವ ಮಾನವ ಅಸ್ಥಿಪಂಜರವೊಂದರಿಂದ ಶಿಲಾತಾಮ್ರಯುಗದ ಸಂದರ್ಭದಲ್ಲಿ ಮೆಡಿಟರೇನಿಯನ್ ಮೂಲದ ಮಾನವರು, ತೆಕ್ಕಲಕೋಟೆ ಹಾಗೂ ಪಿಕ್ಲಿಹಾಳಗಳಲ್ಲಿದ್ದಂತೆ ಇಲ್ಲೂ ವಾಸಿಸುತ್ತಿದ್ದ ಅಂಶ ವೇದ್ಯವಾಗುತ್ತದೆ. ಕಾವೇರಿಯ ಎಡದಂಡೆಯ ಮೇಲಿರುವ ಮುತ್ತಲವಾಡಿಯಲ್ಲಿ, ಬರಿಗೈಯಲ್ಲಿ ತಯಾರಿಸಿದ ಕಂದುಬಣ್ಣದ ಮಡಕೆ, ಉಜ್ಜಿ ನಯಗೊಳಿಸಿದ ಕೊಡಲಿ, ಸುತ್ತಿಗೆ ಮುಂತಾದ ಶಿಲಾಯುಧಗಳು ದೊರೆತಿವೆ. ಈ ನೆಲೆಯಲ್ಲೂ ತಲೆದಿಂಬು ಪತ್ತೆಯಾಗಿದೆ. ಈ ನೆಲೆಗಳಲ್ಲಿ ಲಭಿಸಿರುವ ಅವಶೇಷಗಳನ್ನು ಆಧರಿಸಿ, ರೇಡಿಯೋ ಕಾರ್ಬನ್ ಕಾಲನಿರ್ಣಯ ವಿಧಾನದ ಮೂಲಕ ನವಶಿಲಾಯುಗ ಮಾನವರ ಕಾಲವನ್ನು ಸುಮಾರು ಕ್ರಿ.ಪೂ. ೧೯೦೦–೯೦೦ ಎಂದು ವಿದ್ವಾಂಸರು ಈಗಾಗಲೇ ನಿರ್ಧರಿಸಿದ್ದಾರೆ.

ಈ ಸಂಸ್ಕೃತಿಯ ಮುಂದಿನ ಹಂತವಾದ ಬೃಹತ್ ಶಿಲಾಯುಗ (ಕಬ್ಬಿಣ ಯುಗ) ಸಂಸ್ಕೃತಿಗೆ (ಕ್ರಿ.ಪೂ.೧೨೦೦–೨೫೦) ಸೇರಿದ ಅವಶೇಷಗಳು ತಾಲೂಕಿನ ತಿ.ನರಸೀಪುರ, ಬನ್ನೂರು, ಮುತ್ತಲವಾಡಿ ಹಾಗೂ ಕಾವೇರಿಪುರಗಳಲ್ಲಿ ಪತ್ತೆಯಾಗಿವೆ. ಅದರಲ್ಲೂ ತಿ.ನರಸೀಪುರ, ಬನ್ನೂರು ಹಾಗೂ ಕಾವೇರಿಪುರ ನಿವೇಶನಗಳು ಈ ಸಂಸ್ಕೃತಿಗೆ ಸೇರಿದ ವಸತಿನೆಲೆಗಳಾಗಿವೆ. ಈ ನೆಲೆಗಳಲ್ಲಿ ಕಪ್ಪು, ಕೆಂಪು ವರ್ಣದ ಮಡಕೆಯ ಚೂರುಗಳೂ ದೊರೆತಿವೆ. ಬನ್ನೂರಿನಲ್ಲಿ ಪತ್ತೆಯಾಗಿರುವ ಮಡಕೆಯ ಚೂರುಗಳ ಮೇಲೆ ಗೀರುಗಳು ಕಂಡು ಬಂದಿದೆ. ಮುತ್ತಲವಾಡಿ ನೆಲೆಯಲ್ಲಿ ಈ ಬಗೆಯ ಮಡಕೆಯ ಚೂರುಗಳ ಜೊತೆಗೆ ವಿವಿಧ ಶಿಲಾಯುಧಗಳೂ ದೊರೆತಿವೆ. ತಿ.ನರಸೀಪುರದಲ್ಲಿ ಪತ್ತೆಯಾಗಿರುವ ಕಪ್ಪುವರ್ಣ ಲೇಪಿತ ಕೆಂಪುಬಣ್ಣದ ಮಡಕೆಯ ಚೂರುಗಳು ಸಾವಲಗಾ ಮಡಕೆಯ ಮಾದರಿಯನ್ನು ಹೋಲುತ್ತವೆಂದು ಭಾವಿಸಲಾಗಿದ್ದು, ಇದರ ಕಾಲವನ್ನು ಕ್ರಿ.ಪೂ. ೧೫೦೦–೮೦೦ ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಕ್ರಿ.ಪೂ. ಮೂರನೆಯ ಶತಮಾನದವರೆಗೂ ಬೃಹತ್ ಶಿಲಾಯುಗ ಸಂಸ್ಕೃತಿಯು ತಿ.ನರಸೀಪುರ ಪರಿಸರದಲ್ಲಿ ಅಸ್ತಿತ್ವದಲ್ಲಿತ್ತೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದರ ಮುಂದಿನ ಹಂತವಾದ ಇತಿಹಾಸಾರಂಭಕಾಲಕ್ಕೆ (ಕ್ರಿ.ಶ.ಒಂದರಿಂದ ಮೂರನೆಯ ಶತಮಾನ) ಸೇರಿದ ಅವಶೇಷಗಳೂ ತಾಲೂಕಿನ ತಿ.ನರಸೀಪುರ, ಹೆಮ್ಮಿಗೆ, ಬನ್ನೂರು ಹಾಗು ತಲಕಾಡಿನ ನಿವೇಶನಗಳಲ್ಲಿ ಪತ್ತೆಯಾಗಿವೆ. ಈ ಸಾಂಸ್ಕೃತಿಕ ಹಂತಕ್ಕೆ ಸೇರಿದ ಸ್ತರಗಳಲ್ಲಿ ಕೆಂಪುವರ್ಣ ಲೇಪನದ ಮೇಲೆ ಬಿಳಿಯವರ್ಣದಲ್ಲಿ ಚಿತ್ರಿಸಲ್ಪಟ್ಟಿರುವ ಮಡಕೆಯ ತುಣುಕುಗಳು ಅಧಿಕ ಪ್ರಮಾಣದಲ್ಲಿ ದೊರೆತಿವೆ. ಅಲ್ಲದೆ ತಲಕಾಡಿನ ನಿವೇಶನದಲ್ಲಿ ಇವುಗಳ ಜೊತೆಗೆ ರೋಮನ್ ನಾಣ್ಯದ ಅಚ್ಚು ಲಭಿಸಿರುವುದು ಉಲ್ಲೇಖಾರ್ಹ.



ಇದು ಆ ದಿನಗಳಲ್ಲಿ ಈ ಪ್ರದೇಶವೂ ರೋಮನ್ ಸಂಪರ್ಕವನ್ನು ಹೊಂದಿದ್ದ ಅಂಶವನ್ನು ಸೂಚಿಸುವಂತಿದೆ.

**ಪೌರಾಣಿಕ ಹಿನ್ನೆಲೆ :** ತಾಲೂಕು ಕೇಂದ್ರ ತಿರುಮಕೂಡಲು ನರಸೀಪುರದ ಸಂಗಮ ಸ್ಥಳದಲ್ಲಿ ಹಿಂದೆ ಅಗಸ್ತ್ಯಮುನಿಗಳ ಆಶ್ರಮವಿತ್ತೆಂದು ಹೇಳಲಾಗುತ್ತದೆ. ನೆರೆಯ ಗರ್ಗೇಶ್ವರಿಯು ಗಾರ್ಗೇಯಮುನಿಗಳ ಆಶ್ರಮವಿದ್ದ ಸ್ಥಳವೆಂದು ಐತಿಹ್ಯವಿದೆ. ಸೋಮನಾಥಪುರವು ವಶಿಷ್ಠ ಮಹರ್ಷಿಗಳ ಆಶ್ರಮವಿದ್ದ ಸ್ಥಳ ಎಂದು ೧೬ನೆಯ ಶತಮಾನದ ಶಾಸನವೊಂದು ದಾಖಲಿಸಿದೆ. ತಿರುಮಕೂಡಲಿನ ಅಗಸ್ತ್ಯೇಶ್ವರ ಲಿಂಗದ ಪ್ರತಿಷ್ಠಾ ಸಂದರ್ಭದಲ್ಲಿ ಅಗಸ್ತ್ಯ ಮುನಿಗಳ ಸೂಚನೆಯಂತೆ ಉತ್ತರದಿಂದ ಶಿವಲಿಂಗವನ್ನು ತರಲು ಹೋದ ಹನುಮಂತನು ಬರುವಲ್ಲಿ ವಿಳಂಬವಾದಾಗ ಅಗಸ್ತ್ಯರು ಮರಳಿನ ಲಿಂಗವನ್ನೇ ಪ್ರತಿಷ್ಠಾಪಿಸಿ ಆರಾಧಿಸಿದರಂತೆ, ಇದರಿಂದ ಕೋಪಗೊಂಡ ಹನುಮಂತನು ಆ ಶಿವಲಿಂಗವನ್ನು ಸ್ಥಳಾಂತರಿಸಲು ಯತ್ನಿಸಿದಾಗ ಶಿವಲಿಂಗ ಮುಕ್ಕಾಯಿತು. ಆದರೆ ಹನುಮಂತ ತಂದಿದ್ದ ಶಿವಲಿಂಗವನ್ನು ಸಮೀಪದಲ್ಲೇ ಪ್ರತಿಷ್ಠಾಪಿಸಲಾಯಿತೆಂದು ಹೇಳಲಾಗುತ್ತದೆ. ತಲಕಾಡು ಪಟ್ಟಣಕ್ಕೆ ತಲ ಮತ್ತು ಕಾಡ ಎಂಬ ಸೋದರರಿಂದಾಗಿ ಆ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಇಲ್ಲಿ ಋಷಿಮುನಿಗಳು ಗಜರೂಪದಲ್ಲಿ ಶಾಪವಿಮೋಚನೆಗಾಗಿ ಸಂಚರಿಸುತ್ತಿದ್ದುದರಿಂದ ಅದಕ್ಕೆ ಗಜಾರಣ್ಯ ಎಂಬ ಹೆಸರೂ ಇತ್ತೆಂದು ತಿಳಿದು ಬರುತ್ತದೆ. ತಾಲೂಕು ಕೇಂದ್ರ ನರಸೀಪುರದಲ್ಲಿರುವ ಗುಂಜಾ ನರಸಿಂಹಸ್ವಾಮಿಯಿಂದಾಗಿ ಆ ಪಟ್ಟಣವು ಕಾಶಿಗಿಂತ ಒಂದು ಗುಲಗಂಜಿಯಷ್ಟು ಹೆಚ್ಚು ಪಾವಿತ್ರ್ಯತೆಯನ್ನು ಹೊಂದಿರುವ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗುತ್ತದೆ.

**ಇತಿಹಾಸಕಾಲ**

ರಾಜ್ಯದಲ್ಲಿ ಇತಿಹಾಸಕಾಲದ ಆರಂಭವು ಮೌರ್ಯ ಚಕ್ರವರ್ತಿ ಅಶೋಕನೊಂದಿಗೆ ಆರಂಭವಾಗುತ್ತದೆ. ರಾಜ್ಯದ ಮಸ್ಕಿ, ಸನ್ನತಿ, ಕೊಪ್ಪಳ, ಪಾಲ್ಕಿಗುಂಡು, ಜಟಿಂಗರಾಮೇಶ್ವರ ಮುಂತಾದೆಡೆ ದೊರೆತಿರುವ ಅಶೋಕನ ಪ್ರಾಕೃತ ಶಾಸನಗಳೂ ಸೇರಿದಂತೆ ಮೌರ್ಯರ ಕಾಲದ ಅವಶೇಷಗಳು ಕರ್ನಾಟಕದಲ್ಲಿ ಲಭಿಸಿವೆ. ಅಲ್ಲದೆ, ಮಹಿಷಮಂಡಲಕ್ಕೆ ಬೌದ್ಧಭಿಕ್ಷುಗಳು ಧರ್ಮಪ್ರಸಾರಕ್ಕೆ ಬಂದಿದ್ದರೆಂಬ ಅಭಿಪ್ರಾಯವೂ ಇದೆ. ಆದರೂ, ತಲಕಾಡಿನ ಗಂಗರ ಆಡಳಿತದೊಂದಿಗೆ ತಾಲೂಕಿನ ಇತಿಹಾಸವು ಸುಮಾರು ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ಆರಂಭಗೊಳ್ಳುತ್ತದೆ.

**ತಲಕಾಡಿನ ಗಂಗರು :** ಕರ್ನಾಟಕವನ್ನಾಳಿದ ಅರಸುಮನೆತನಗಳಲ್ಲಿ ಗಂಗರಿಗೆ ವಿಶಿಷ್ಟ ಸ್ಥಾನವಿದೆ. ಕರ್ನಾಟಕದ ದಕ್ಷಿಣಭಾಗ, ನೆರೆಯ ತಮಿಳುನಾಡು ರಾಜ್ಯದ ಪಶ್ಚಿಮಭಾಗಗಳ ಮೇಲೆ ತಮ್ಮ ಪ್ರಭುತ್ವವನ್ನು ಸುಮಾರು ಏಳು ಶತಮಾನಗಳ ಕಾಲ ಸ್ಥಾಪಿಸಿದ್ದ ಇವರು ಆರಂಭದಲ್ಲಿ ಕುವಲಾಲ (ಕೋಲಾರ)ದಿಂದ ರಾಜ್ಯಭಾರ ನಡೆಸುತ್ತಿದ್ದರೆಂದು ಹೇಳಲಾಗುತ್ತದೆ. ಮುಂದೆ ಇವರು ರಾಜಧಾನಿಯನ್ನು ತಲಕಾಡಿಗೆ ಸ್ಥಳಾಂತರಿಸಿಕೊಂಡರು. ಅದರೊಂದಿಗೆ ಈ ತಾಲೂಕು ಪ್ರದೇಶವೂ ಗಂಗಸಾಮ್ರಾಜ್ಯದ ಗಂಗವಾಡಿ ೯೬೦೦೦ದ ತಿರುಳುನಾಡಾಗಿ ಪರಿಣಮಿಸಿತು. 'ಮದಗಜ' ಇವರ ರಾಜ ಲಾಂಛನವಾಗಿತ್ತು.

ಗಂಗರ ಮೂಲಕ್ಕೆ ಸಂಬಂಧಿಸಿದಂತೆ, ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಸುಮಾರು ೧೦–೧೧ನೆಯ ಶತಮಾನಕ್ಕೆ ಸೇರಿದ ಶಾಸನಗಳು, ಹೊರಗಿನಿಂದ ಬಂದ ಗಂಗ ಸೋದರರಿಗೆ ಜೈನಯತಿ ಸಿಂಹನಂದಿಯ ಆಶೀರ್ವಾದದಿಂದಾಗಿ ರಾಜ್ಯ ಸ್ಥಾಪಿಸಲು ಸಾಧ್ಯವಾಯಿತೆಂದು ದಾಖಲಿಸುತ್ತವೆ. ಆದರೆ ಅವು ಸಮಕಾಲೀನ ದಾಖಲೆಗಳಲ್ಲವೆಂಬ ಕಾರಣದಿಂದ ಈ ಅಭಿಪ್ರಾಯವನ್ನು ಎಸ್. ಶ್ರೀಕಂಠಶಾಸ್ತ್ರಿ, ಬಿ. ಷೇಕ್‌ಆಲಿ ಮುಂತಾದ ವಿದ್ವಾಂಸರು ಅಲ್ಲಗಳೆದಿದ್ದಾರೆ. ಇತ್ತೀಚಿನ ಅಧ್ಯಯನಗಳು ಅವರು ಸ್ಥಳೀಯರಿದ್ದು, ಗಂಗಡಿಕಾರ ಒಕ್ಕಲಿಗ ಜನಾಂಗಕ್ಕೆ ಸೇರಿದವರೆಂಬ ಅಭಿಪ್ರಾಯವನ್ನು ಮತ್ತಷ್ಟು ಗಟ್ಟಿಗೊಳಿಸಿವೆ.

ದಡಿಗ ಹಾಗೂ ಮಾಧವ ಸೋದರರಿಂದ ಸ್ಥಾಪಿಸಲ್ಪಟ್ಟ ಗಂಗರಾಜ್ಯವನ್ನು ಸುಮಾರು ಎಂಟನೆಯ ಶತಮಾನದ ಆರಂಭಿಕ ದಶಕಗಳವರೆಗೆ ಗಂಗ ಮನೆತನಕ್ಕೆ ಸೇರಿದ ಮಾಧವ, ಒಂದನೆಯ ಹರಿವರ್ಮ (ಇವನ ಕಾಲದಲ್ಲಿ ತಲಕಾಡು ಅವರ ಎರಡನೆಯ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವಿದೆ), ಇಮ್ಮಡಿ ಮಾಧವ, ವಿಷ್ಣುಗೋಪ, ಮುಮ್ಮಡಿ ಮಾಧವ, ಅವನೀತ, ದುರ್ವಿನೀತ, (ತಲಕಾಡೇ ಇವನ ರಾಜಧಾನಿಯಾಯಿತು) ಮುಷ್ಕರ, ಪೊಲವೀರ, ಶ್ರೀವಿಕ್ರಮ, ಭೂವಿಕ್ರಮ ಹಾಗೂ ಒಂದನೆಯ ಶಿವಮಾರ (೬೭೯–೭೨೫) ಆಳ್ವಿಕೆ ನಡೆಸಿದರು. ಈ ಅರಸರ ಆಳ್ವಿಕೆಯನ್ನು ನಾಡಿನ ವಿವಿಧ ಭಾಗದಲ್ಲಿ ದೊರೆತಿರುವ ಶಾಸನಗಳು ಖಚಿತಪಡಿಸುತ್ತವೆ. ಆದರೆ ಈ ಅರಸರ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳು ತಾಲೂಕಿನಲ್ಲಿ ಲಭಿಸಿಲ್ಲ. ಬದಲಾಗಿ ಶ್ರೀಪುರುಷನ (೭೨೬–೮೮) ಆಡಳಿತಕ್ಕೆ ಸಂಬಂಧಿಸಿದಂತೆ ದೊರೆತಿರುವ ಶಾಸನಗಳೇ ತಾಲೂಕಿನಲ್ಲಿ ದೊರೆತಿರುವ ಪ್ರಾಚೀನ ಗಂಗಶಾಸನಗಳಾಗಿವೆ. ಇವುಗಳಲ್ಲಿ ತಲಕಾಡಿನ ೭೨೬ರ ಶಾಸನ, ಶ್ರೀಪುರುಷನ ಆಳ್ವಿಕೆಯ ಮೊದಲ ವರ್ಷದಲ್ಲಿ ನೀಡಲ್ಪಟ್ಟಿದ್ದು, ಕಾರ್ತಿಕ ಹುಣ್ಣಿಮೆಯಂದು ತಲೈಕಾಡ ಇಪ್ಪತ್ತೈವರಿಗೆ ಸಿಂಧರಸ, ದೇಚಸತ್ತಿಯರಸ ಹಾಗೂ ಇತರರ ಕೋರಿಕೆಯಂತೆ ಪರಮಗೂಳನ ಮಗನಾದ ಅರಕೇಸಿಯು ಕೆಲವು ತೆರಿಗೆಗಳನ್ನು ಮನ್ನಾ ಮಾಡಿದ ಅಂಶವನ್ನು ದಾಖಲಿಸುತ್ತದೆ. ಇದೇ ಅರಸನಿಗೆ ಸೇರಿದ ಬನ್ನೂರಿನ ಶಾಸನ ತ್ರುಟಿತಗೊಂಡಿದ್ದರೂ, ಕಮ್ಮಾರರು ಈ ಶಾಸನವನ್ನು ಬರೆದರೆಂದು ಉಲ್ಲೇಖಿಸುತ್ತದೆ. ಆಲ್ಗೋಡಿನ ಸಿದ್ದೇಶ್ವರಗುಡಿ ಪರಿಸರದಲ್ಲಿರುವ ಶಾಸನ, ಭೂದಾನ ಬಿಟ್ಟಿದ್ದನ್ನು ದಾಖಲಿಸಿರುವಂತೆ ತೋರುತ್ತದೆ. ಹೆಮ್ಮಿಗೆಯ ಶಾಸನ, ಅರಸಿಯ ಕೋರಿಕೆಯಂತೆ ಪೆರ್ಮಾನಡಿಗಳು ಪೆಮ್ಮೊಗೆಯ ಪತ್ತೊಂದಿ (ಭೂ ಉತ್ಪನ್ನದ ೧/೧೦ ಭಾಗ)ಯನ್ನು ದಾನ ಬಿಟ್ಟಿದ್ದನ್ನು ದಾಖಲಿಸುತ್ತದೆ. ಅದೇ ಊರಲ್ಲಿರುವ ಇನ್ನೊಂದು ಶಾಸನ, ಸೊಲಗೆ ಭೂಮಿಯನ್ನು ದಾನಬಿಟ್ಟ ಅಂಶವನ್ನು ದಾಖಲಿಸಿರುವಂತೆ ತೋರುತ್ತದೆ. ಶ್ರೀಪುರುಷನ ಆಳ್ವಿಕೆಯಲ್ಲಿ ರಾಜಧಾನಿಯನ್ನು ತಲಕಾಡಿನಿಂದ ಮಾನ್ಯಪುರ (ಮಣ್ಣೆ, ನೆಲಮಂಗಲ ತಾಲೂಕು)ಕ್ಕೆ ವರ್ಗಾಯಿಸುವ ಮೂಲಕ, ರಾಷ್ಟ್ರಕೂಟರ ಧಾಳಿಯನ್ನು ನಿಯಂತ್ರಿಸಲು ಯತ್ನಿಸಲಾಯಿತು. ಬಾದಾಮಿ ಚಲುಕ್ಯರ ಸಮೀಪವರ್ತಿಗಳಾಗಿದ್ದ ಗಂಗರು ರಾಷ್ಟ್ರಕೂಟರ ಕಡುವಿರೋಧಿಗಳಾಗಿ ಸುಮಾರು ವರ್ಷಗಳ ಕಾಲ ರಾಷ್ಟ್ರಕೂಟರ ವಿರುದ್ಧ ಹೋರಾಟ ಮುಂದುವರಿಸಬೇಕಾಗಿ ಬಂತು.



ಶ್ರೀಪುರುಷನ ನಂತರ ಗಂಗಸಿಂಹಾಸನವನ್ನು ಏರಿದ ಇಮ್ಮಡಿ ಸೈಗೊಟ್ಟ ಶಿವಮಾರ (೭೮೮–೮೧೬), ರಾಷ್ಟ್ರಕೂಟರ ಅಂತಃಕಲಹದಲ್ಲಿ ಭಾಗವಹಿಸುವಲ್ಲಿ ತಪ್ಪು ಲೆಕ್ಕಾಚಾರ ಹಾಕಿ ಸೆರೆಮನೆ ಸೇರಬೇಕಾಯಿತು. ಈ ಅವಧಿಯಲ್ಲಿ ಗಂಗವಾಡಿಯು ಸ್ವಲ್ಪ ಕಾಲ ರಾಷ್ಟ್ರಕೂಟರ ವಶದಲ್ಲಿತ್ತು. ಇವನು ಸೆರೆಮನೆಯಲ್ಲಿದ್ದಾಗ ಅವನ ಮಗನಾದ ಮಾರಸಿಂಹನು (೭೯೬–೭೭) ಗಂಗವಾಡಿಯನ್ನು ಆಳಿದಂತೆ ತೋರುತ್ತದೆ. ಆದರೆ ರಾಷ್ಟ್ರಕೂಟ ರಾಜಕುಮಾರ ಕಂಬನು ಗಂಗವಾಡಿಯ ಪ್ರಾಂತಾಧಿಕಾರಿಯಾಗಿದ್ದನು. ಇಮ್ಮಡಿ ಶಿವಮಾರನ ಕಾಲಕ್ಕೆ ಸೇರಿದ ವಿಜಯಪುರದ ಶಾಸನ, ಕಿಳಲೆ ನಾಡನ್ನು ಮಣಲೆಯರಸನು ಆಳುತ್ತಿದ್ದಾಗ, ಕಿರುಪೆನ್ನಗರದ (ವಿಜಯಪುರ) ಹನ್ನೀರ್ವರಿಗೆ ಪತ್ತೊನ್ದಿ (ದಶವಂದ)ಯನ್ನು ದಾನಬಿಟ್ಟ ಅಂಶವನ್ನು ದಾಖಲಿಸುತ್ತಾ, ಸಾಂದರ್ಭಿಕವಾಗಿ ಮೂಳೂರು (ಮುಳ್ಳೂರು) ಗ್ರಾಮವನ್ನು ಉಲ್ಲೇಖಿಸುತ್ತದೆ.

ಇಮ್ಮಡಿ ಶಿವಮಾರನ ನಂತರ ಅಧಿಕಾರಕ್ಕೆ ಬಂದ ಒಂದನೆಯ ರಾಚಮಲ್ಲ (೮೧೬–೮೪೩)ನು ನೊಳಂಬರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದು, ಇವನು ತಲಕಾಡಿನಿಂದ ರಾಜ್ಯಭಾರ ನಡೆಸಿದರೆ, ಅವನ ದಾಯಾದಿ ಒಂದನೆಯ ಪೃಥ್ವಿಪತಿಯು, ಪರುವಿ(ಅನಂತಪುರ ಜಿಲ್ಲೆ)ಯಿಂದ ಗಂಗಶಾಖೆಯೊಂದರ ರಾಜನಾಗಿ ರಾಜ್ಯಭಾರ ಮಾಡಲಾರಂಭಿಸಿದನು. ಒಂದನೆಯ ರಾಚಮಲ್ಲನ ಕಾಲಕ್ಕೆ ಸೇರಿದ ಆಲ್ಗೋಡಿನ ಶಾಸನದಿಂದ, ಗೋವಿಂದರಸನ ಪೆರ್ಗಡೆಯಾದ ಚಾಮುಂಡಯ್ಯನು ಕೆರೆ ನಿರ್ಮಿಸಿ, ತೂಬನ್ನು ಅಳವಡಿಸಿದ ಅಂಶ ವೇದ್ಯವಾಗುತ್ತದೆ. ಇವನ ಉತ್ತರಾಧಿಕಾರಿಯಾದ ಒಂದನೆಯ ಎರೆಯಪ್ಪ ನೀತಿಮಾರ್ಗ (೮೪೩–೮೭೦)ನ ಆಡಳಿತಾವಧಿಯಲ್ಲಿ ಗಂಗ–ರಾಷ್ಟ್ರಕೂಟ ದ್ವೇಷ ಅಂತ್ಯಗೊಂಡು ಅವುಗಳ ನಡುವೆ ವೈವಾಹಿಕ ಸಂಬಂಧ ಏರ್ಪಟ್ಟಿತು. ಇದರೊಂದಿಗೆ ಗಂಗರು ರಾಷ್ಟ್ರಕೂಟರ ನಿಷ್ಠಾವಂತ ಸಾಮಂತರಾದರು. ಬನ್ನೂರಿನಲ್ಲಿರುವ ಎರಡು ಶಾಸನಗಳು ಸುಮಾರು ೯ನೆಯ ಶತಮಾನಕ್ಕೆ ಸೇರಿದ್ದು, ಅವುಗಳಲ್ಲೊಂದು ಬನ್ನಿಯೂರ ಸಾವಿರ ಪುರಜನರ ಸಮ್ಮುಖದಲ್ಲಿ ಎಪ್ಪತ್ತುಗುಳ ಗದ್ದೆಯನ್ನು ಚಾವಯ್ಯನಿಗೆ ಭಟ್ಟವೃತ್ತಿಯಾಗಿ ದಾನ ಬಿಟ್ಟ ಅಂಶವನ್ನು ದಾಖಲಿಸಿದರೆ, ಇನ್ನೊಂದು ಶಾಸನ ಬಹಳ ಹಾಳಾಗಿದೆ. ಇವನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ರಾಚಮಲ್ಲ (೮೭೦–೯೧೯)ನ ಆಳ್ವಿಕೆಯಲ್ಲಿ ಅವನ ಮಗನಾದ ಯುವರಾಜ ಇಮ್ಮಡಿ ಎರೆಗಂಗನು ನೊಳಂಬ ಮಹೇಂದ್ರನನ್ನು ಕೊಂದು (೮೯೫) ನೊಳಂಬಾಂತಕ ಪೆರ್ಮಾನಡಿ ಎಂಬ ಬಿರುದನ್ನು ಧರಿಸಿದ ಅಂಶ ದೊಡ್ಡಬಾಗಿಲನ ವೀರಗಲ್ಲು ಶಾಸನದಿಂದ ವೇದ್ಯವಾಗುತ್ತಿದ್ದು, ಅದರಲ್ಲಿ ನೊಳಂಬ ವಿಕ್ರಮಾದಿತ್ಯ, ಉದಯಾದಿತ್ಯರ ಉಲ್ಲೇಖವಿದ್ದು, ಕಲ್ನಾಟಾಗಿ ಭೂದಾನ ಬಿಟ್ಟ ಅಂಶವನ್ನೂ ದಾಖಲಿಸುತ್ತದೆ. ಇಮ್ಮಡಿ ರಾಚಮಲ್ಲನ ಅಧಿಕಾರಾರಂಭದ ದಿನಗಳಲ್ಲಿ (ಸು.೮೭೦) ನೀಡಲ್ಪಟ್ಟಿರುವ ದೊಡ್ಡಹುಂಡಿ ವೀರಗಲ್ಲು ಶಾಸನ (ಈಗ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದೆ). ಒಂದನೆಯ ಎರೆಗಂಗ ನೀತಿಮಾರ್ಗನು ಗತಿಸಿದಾಗ ಅವನ ಮನೆಮಗನಾದ ಅಗರಯ್ಯನು ಸತ್ತ ಅರಸನಿಗೆ ಕೀಲ್ಗುಂಟೆಯಾಗಿ ತನ್ನ ದೇಹವನ್ನು

ಒಪ್ಪಿಸಿದ ಸಂದರ್ಭದಲ್ಲಿ, ಇಮ್ಮಡಿ ರಾಚಮಲ್ಲನು ಗಂಗವಾಡಿಯ ಕಪ್ಪಳ್ಳಿ ಗ್ರಾಮವನ್ನು ಕಲ್ನಾಡಾಗಿ ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಅಲ್ಲದೆ ಈ ಶಾಸನ, ಅರಸನನ್ನು ಕುವಲಾಲಪುರವರೇಶ್ವರ, ನಂದಿಗಿರಿನಾಥನೆಂದೂ ಹೊಗಳಿರುವುದು ಉಲ್ಲೇಖಾರ್ಹ. ಈ ಶಾಸನಶಿಲ್ಪವು ಒಂದು ಅಪೂರ್ವ ದಾಖಲೆಯಾಗಿದ್ದು, ಮರಣಶಯ್ಯೆಯಲ್ಲಿರುವ ಅರಸ, ಬಲಬದಿಯಲ್ಲಿ ನಿಂತಿರುವ ಸೇವಕ ಅಗರಯ್ಯ, ಅರಸನ ಎಡಬದಿಯಲ್ಲಿರುವ ರಾಜಕುಮಾರ ಇಮ್ಮಡಿ ರಾಚಮಲ್ಲರ ಉಬ್ಬು ಶಿಲ್ಪಕೆತ್ತನೆಯನ್ನೂ ಒಳಗೊಂಡಿದೆ.

ಇಮ್ಮಡಿ ರಾಚಮಲ್ಲನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಎರೆಗಂಗ ನೀತಿಮಾರ್ಗ (೯೧೯–೨೩)ನ ಕಾಲಕ್ಕೆ ಸೇರಿದ ದೊಡ್ಡಬಾಗಿಲು ಶಾಸನವನ್ನು ಈಗಾಗಲೇ ಗಮನಿಸಲಾಗಿದೆ. ಇವನ ನಂತರ ಅಧಿಕಾರಕ್ಕೆ ಬಂದ ನರಸಿಂಹ (೯೨೩)ನ ಅಲ್ಪಾವಧಿಯ ಆಡಳಿತದ ನಂತರ ಮುಮ್ಮಡಿ ರಾಚಮಲ್ಲ (೯೨೩–೩೬) ಸಿಂಹಾಸನವನ್ನೇರಿದನು. ಇವನ ಕಾಲಕ್ಕೆ ಸೇರಿದ ೯೩೫ರ ತಲಕಾಡು ಶಾಸನದಿಂದ ತಲಕಾಡಿನ ಮಹಾನಖರರು, ಮಂಚವಯ್ಯ ಸೇರಿದಂತೆ ಇಪ್ಪತ್ತೈದು ಪಟ್ಟಣ ವಸಂತರು ಕೆರೆಯ ದುರಸ್ತಿಗೆಂದು ದ್ರವ್ಯವನ್ನು ನೀಡಿ ಬಿತ್ತುವಾಡದ ಹಕ್ಕನ್ನು ಪಡೆದ ಅಂಶವನ್ನು ದಾಖಲಿಸಿದೆ. ಇವನನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ ಅವನ ಸೋದರ ಇಮ್ಮಡಿ ಬೂತುಗ (೯೩೬–೬೦)ನು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಬಂಧು, ಹಿತೈಷಿ ಹಾಗೂ ಸೇನಾನಿಯಾಗಿದ್ದು, ರಾಷ್ಟ್ರಕೂಟ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ದುಡಿದು, ಚಕ್ರವರ್ತಿಯಿಂದ ಮನ್ನಣೆ ಗಳಿಸಿದ್ದ ಅಂಶ, ಅವನ ಆತಕೂರು (ಮದ್ದೂರು ತಾ.) ಶಾಸನದಿಂದ ವೇದ್ಯವಾಗುತ್ತದೆ. ಇವನ ನಂತರ ಅವನ ಹಿರಿಯ ಮಗ ಮರುಳದೇವ (೯೬೦–೬೩) ಅಲ್ಪಕಾಲ ರಾಜ್ಯಭಾರ ಮಾಡಿದನು. ಆದರೆ ಈ ಅರಸರ ಶಾಸನಗಳು ಈ ತಾಲೂಕಿನಲ್ಲಿ ಲಭಿಸಿಲ್ಲ.

ಆನಂತರ ಬಂದ ಮುಮ್ಮಡಿ ಮಾರಸಿಂಹನು ರಾಷ್ಟ್ರಕೂಟ ಸಾಮ್ರಾಜ್ಯದ ಸಂರಕ್ಷಣೆಯಲ್ಲೇ ಸಾವನ್ನಪ್ಪಿದನು. ಇವನ ಆಡಳಿತದ ಆರನೆಯ ವರ್ಷ (೯೬೮)ದಲ್ಲಿ ನೀಡಲ್ಪಟ್ಟಿರುವ ಬಸವನಹಳ್ಳಿಯ ಶಾಸನ, ಎರೆಯಂಗೇಶ್ವರ ದೇವರ ಪೂಜೆ ಸುಣ್ಣ–ಸೋದೆ ಸೇವೆಗಳಿಗೆಂದು ಎರಡು ಖಂಡುಗ ನೀರ್ಮಣ್ಣು, ಎರಡು ಖಂಡುಗ ಮಡುವಿನಮಣ್ಣು ಭೂಮಿಯನ್ನು ಖರೀದಿಸಿ ಸ್ಥಾನಿಕರಾದ ಶ್ರೀಕಂಠಪಂಡಿತ ಭಟಾರರಿಗೆ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲದೆ ಕೆರೆಯ ಬಿತ್ತುವಟ್ಟವನ್ನು ಕೊಡದೆ ಉಣ್ಣುವುದು ದ್ರೋಹವೆಂದು ಎಚ್ಚರಿಸುತ್ತಾ, ಈ ಶಾಸನ ಬರೆದಾತ ಲಕುಲೀಶಭಟಾರನೆಂಬ ಅಂಶವನ್ನು ಅರಹುತ್ತದೆ. ಮಾರಸಿಂಹನ ನಂತರ ಅಧಿಕಾರಕ್ಕೆ ಬಂದ ಗೋವಿಂದರ (೯೭೩)ನ ಅಲ್ಪಾವಧಿ ಆಡಳಿತದ ಬೆನ್ನಲ್ಲೇ ಸಿಂಹಾಸನವನ್ನೇರಿದ ನಾಲ್ಕನೆಯ ರಾಚಮಲ್ಲ (೯೭೪–೯೯೯) ಹಾಗೂ ರಕ್ಕಸಗಂಗರ ಅಧಿಕಾರಾವಧಿಯಲ್ಲಿ ತಮಿಳುನಾಡಿನ ಚೋಳರು ಗಂಗವಾಡಿಯ ಮೇಲೆ ಧಾಳಿ ಮಾಡಿ ತಲಕಾಡು ಸೇರಿದಂತೆ, ಗಂಗವಾಡಿ ೯೬೦೦೦ ಪ್ರಾಂತವನ್ನು ಹಂತಹಂತವಾಗಿ ೧೦೦೬ರ ವೇಳೆಗೆ ವಶಪಡಿಸಿಕೊಂಡಿದ್ದ ಅಂಶ ಅವರ ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ತಲಕಾಡಿನ ಶಾಸನ, ಪೆರ್ಮಾನಡಿ ಹಾಗೂ ನೊಳಂಬರಾಜರನ್ನು ಹೆಸರಿಸಿದರೆ,



ಆಲ್ಗೋಡಿನ ಕೆರೆದಂಡೆಯ ಮೇಲಿರುವ ಶಾಸನ, ದಂಡನಾಯಕ ಗೋವಿಂದಯ್ಯನ ಇಬ್ಬರು ಮಕ್ಕಳಾದ ಮಹಾಬಲಯ್ಯ ಹಾಗೂ ಈಶ್ವರಯ್ಯ ಹಾಗೂ ಮೊಮ್ಮಗ ಚಾವುಂಡರ ಬಗ್ಗೆ ಉತ್ಪ್ರೇಕ್ಷೆಯಿಂದ ಕೂಡಿದ ವರ್ಣನೆಯನ್ನು ಹೊಂದಿದೆ. ಅಲ್ಲೇ ಇರುವ ೯೯೨ರ ಇನ್ನೊಂದು ಶಾಸನ, ಏಚಗಾವುಂಡ ಬಿಟ್ಟ ದತ್ತಿಯನ್ನು ದಾಖಲಿಸಿರುವಂತೆ ತೋರುತ್ತದೆ. ಕಲಿಯೂರಿನ ಗೋಪಾಲಸ್ವಾಮಿ ಗುಡಿಯ ಬಳಿ ಬಿದ್ದಿರುವ ೧೦೦೬ರ ಶಾಸನವನ್ನು ಅಪ್ರಮೇಯ ವಿಜಯಸ್ತಂಭವೆಂದು ಆ ಶಾಸನದಲ್ಲೇ ಕರೆಯಲಾಗಿದೆ. ಈ ಶಾಸನದ ಪ್ರಕಾರ ಕೊತ್ತಮಂಗಲದ ಒಡೆಯನಾದ ಅಪ್ರಮೇಯನು ಒಂದನೆಯ ರಾಜರಾಜ ಚೋಳನ ದಂಡನಾಯಕನಿದ್ದು, ಕಲಿವೂರಿನಲ್ಲಿ ನಡೆದ ಸಂಗ್ರಾಮದಲ್ಲಿ ಪೊಯ್ಸಳ, ಗೋಯಿಗ, ಬೂತುಗ, ಸೇನವಾರ, ನೊಳಂಬರಚಂದಿಗ, ಪೊನ್ನ, ನನ್ನಿಗ, ಬಿರುಗ ನಾಗವರ್ಮ, ನರಗ, ಸಿರಿಗ, ಮುಂತಾದವರನ್ನು ಸೋಲಿಸಿ, ಅನೇಕರನ್ನು ಕೊಂದು ಜಯಸ್ತಂಭವನ್ನು ನಿಲ್ಲಿಸಿದನೆಂದು ಗೊತ್ತಾಗುತ್ತದೆ. ತತ್ಪರಿಣಾಮವಾಗಿ ಗಂಗರಾಜ್ಯವು ಪತನಗೊಂಡು ಚೋಳರ ಆಳ್ವಿಕೆಗೆ ಗಂಗವಾಡಿಯು ಒಳಪಟ್ಟಿತು.

**ಚೋಳರು :** ಒಂದನೆಯ ರಾಜರಾಜ ಚೋಳ (೯೮೫–೧೦೧೪)ನಿಂದ ಆರಂಭಗೊಂಡು ಒಂದನೆಯ ಕುಲೋತ್ತುಂಗ ಚೋಳ (೧೦೭೧–೧೧೨೨)ನ ಆಡಳಿತಾವಧಿಯವರೆಗೆ, ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಮೈಸೂರು ಜಿಲ್ಲೆಯೂ ಸೇರಿದಂತೆ ದಕ್ಷಿಣ ಕರ್ನಾಟಕದ ಬಹುಭಾಗ ಚೋಳ ಸಾಮ್ರಾಜ್ಯಕ್ಕೊಳಪಟ್ಟಿತ್ತು. ಗಂಗರ ರಾಜಧಾನಿ ಪಟ್ಟಣ ತಲಕಾಡಿಗೆ ಚೋಳ ಒಂದನೆಯ ರಾಜರಾಜನ ಹೆಸರಲ್ಲಿ 'ರಾಜರಾಜಪುರ' ಎಂದು ಪುನರ್‌ನಾಮಕರಣ ಮಾಡಲಾಯಿತು. ಆದರೆ ಹೊಯ್ಸಳ ವಿಷ್ಣುವರ್ಧನನ ಯಶಸ್ಸಿನಿಂದಾಗಿ ಚೋಳರು ಸುಮಾರು ೧೧೧೪–೧೬ರಲ್ಲಿ ಗಂಗವಾಡಿಯಿಂದ ಕಾಲ್ತೆಗೆದರಾದರೂ ಮುಮ್ಮಡಿ ರಾಜೇಂದ್ರ (೧೨೭೧) ಹಾಗೂ ರಾಜಾಧಿರಾಜ ಚೋಳರ ಕಾಲದ ಶಾಸನಗಳು ಇದೇ ತಾಲೂಕಿನಲ್ಲಿ ಲಭಿಸಿರುವುದು ಉಲ್ಲೇಖಾರ್ಹ. ಈವರೆಗೆ ಚೋಳರ ಆಳ್ವಿಕೆಯನ್ನು ಸೂಚಿಸುವ ೨೭ ಶಾಸನಗಳು ತಾಲೂಕಿನಲ್ಲಿ ಪತ್ತೆಯಾಗಿದ್ದು, ಅವುಗಳ ನೆರವಿನಿಂದ ಈ ಭಾಗದ ಮೇಲೆ ಉಂಟಾಗಿರಬಹುದಾದ ಚೋಳರಪ್ರಭಾವವನ್ನು ಅರಿಯಬಹುದಾಗಿದೆ.

ಒಂದನೆಯ ರಾಜರಾಜನ ಕಾಲಕ್ಕೆ ಸೇರಿದ ತಾಲೂಕಿನ ನಾಲ್ಕು ಶಾಸನಗಳಲ್ಲಿ ಬನ್ನೂರಿನ ೯೯೩ರ ಹನುಮಂತೇಶ್ವರ ದೇವಾಲಯದ ಕನ್ನಡ ಶಾಸನವು ರಾಜರಾಜನ ಆಳ್ವಿಕೆಯ ಎಂಟನೆಯ ವರ್ಷಕ್ಕೆ ಸೇರಿದೆ. ಈ ಶಾಸನದಿಂದ ಅರಸನಿಗೆ 'ತಿರುಮಗಳ್‌ಪೋಲ' ಎಂಬ ಬಿರುದಿದ್ದ ಅಂಶ ವೇದ್ಯವಾಗುತ್ತಿದ್ದು, ಅಲ್ಲಿನ ಶ್ರೀಕೊಯಿಲ್‌ಗೆ ಎರಡು ಖಂಡುಗ ಹೊಲ, ಮೂರು ಖಂಡುಗ ಗದ್ದೆಯನ್ನು ಮಹಾಜನರು ದಾನ ನೀಡಿ ಪೂಜಾವ್ಯವಸ್ಥೆಯನ್ನು ರೂಪಿಸಿದ ಅಂಶ ಸ್ಪಷ್ಟವಾಗುತ್ತದೆ. ತಡಿಮಾಲಂಗಿಯ ಜನಾರ್ದನ ದೇವಾಲಯದ ತಳಪಾಯದ ಮೇಲಿರುವ ೧೦೦೪ರ ತಮಿಳು ಶಾಸನ. ಕೆಲವು ಸ್ಥಳೀಯ ಗಾಮುಂಡರು ಮಾಯಿಲಂಗೆಯಲ್ಲಿ ಭೂಮಿಯೊಂದನ್ನು ೧೦೦ ಕಳಂಜು ಹೊನ್ನಿಗೆ ಮಾರಿದ್ದನ್ನು ದಾಖಲಿಸಿದ್ದು, ಆ ಹಣವನ್ನು ರವಿಕುಲ ಮಾಣಿಕ್ಯ

ವಿಣ್ಣಗರಾಳ್ವಾರ್ ದೇವಾಲಯದ ಭಂಡಾರದಿಂದ ಪಾವತಿಸಲಾಗಿತ್ತು. ಒಂದನೆಯ ರಾಜರಾಜನಿಗೆ 'ರವಿಕುಲವಮಾಣಿಕ್ಯ' ಎಂಬ ಬಿರುದಿದ್ದು, ಆ ಹೆಸರಲ್ಲೇ ದೇವಾಲಯವೊಂದನ್ನು ತಡಿಮಾಲಂಗಿಯಲ್ಲಿ ಬಹುಶಃ ಅರಸನೇ ನಿರ್ಮಿಸಿದ್ದಿರಬೇಕೆಂದು ಇದರಿಂದ ತರ್ಕಿಸಬಹುದಾಗಿದೆ. ಅಲ್ಲದೆ ಈ ದೇವರ ಭಂಡಾರಕ್ಕೆ ಅರಸನ ಅಕ್ಕ ಪೆರಿಯ ಕುಂದವ್ವೆಯು ತನ್ನ ಭಂಡಾರದಿಂದ ನಗದು ದತ್ತಿ ನೀಡಿದ್ದನ್ನೂ ದಾಖಲಿಸಿದೆ. ಒಂದನೆಯ ರಾಜರಾಜನಿಗೆ ಕುಂದವ್ವೆ ಎಂಬ ಹೆಸರಿನ ಮಗಳಿದ್ದುದರಿಂದ ಇವಳನ್ನು ಪೆರಿಯಕುಂದವ್ವೆ ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ. ಇಲ್ಲಿ ಉಲ್ಲೇಖಿತಗೊಂಡಿರುವ ೧೦೦ ಕಲಂಜು ಹೊನ್ನನ್ನು, ತುಲೈನಿರೈ ಸೆಂಪೊನ್' ಎಂದು ಕರೆಯಲಾಗಿದ್ದು, ಅದು ನಿಶ್ಚಿತ ತೂಕ ಹಾಗೂ ಮುದ್ರೆಗಳನ್ನೊಳಗೊಂಡ ಶುದ್ಧ ಚಿನ್ನದ ನಾಣ್ಯವೆಂಬುದನ್ನೂ ಸೂಚಿಸುತ್ತದೆ. ಇದೇ ದೇವಾಲಯದಲ್ಲಿರುವ ಇನ್ನೊಂದು ಶಾಸನ ಕೂಡ ಮರದೂರಿನ ಸಭೆಯವರು ಕಾಸುಗಳ ಲೆಕ್ಕದಲ್ಲಿ ತೂಗಿದ ೧೦೦ ಕಲಂಜು ಹೊನ್ನಿಗೆ ಭೂಮಿಯನ್ನು ಮಾರಿದ ಅಂಶವನ್ನು ದಾಖಲಿಸಿದ್ದು, ದೇವಾಲಯಕ್ಕೆ ಬಿಟ್ಟಿದ್ದ ಈ ದತ್ತಿಯನ್ನು ನಗರ್ತರು ನೋಡಿಕೊಳ್ಳಬೇಕಾಗಿತ್ತು. ಇದೇ ಅರಸನ ಆಳ್ವಿಕೆಗೆ ಸೇರಿದ ೧೦೦೬ರ ಕಲಿಯೂರು ಶಾಸನ ಗಂಗರನ್ನು ಸೋಲಿಸಿ, ತಲಕಾಡನ್ನು ವಶಪಡಿಸಿಕೊಂಡಿದ್ದ ಚೋಳರನ್ನು ಹೊರಗಟ್ಟಲು ಮುನ್ನುಗ್ಗಿಬಂದ ಹೊಯ್ಸಳ, ನೊಳಂಬ, ಶಾಂತರ, ಸೇನವಾರ ಮುಂತಾದವರನ್ನೊಳಗೊಂಡ ಸಾಮಂತರ ಒಕ್ಕೂಟವನ್ನು, ರಾಜರಾಜನ ಪಾದಪಂಕಜಭ್ರಮರನಾಗಿದ್ದು ಹಲವಾರು ಯೋಧರನ್ನು ಕೊಂದು ದಿಗ್ವಿಜಯಿಯಾದ ತೆಲ್ಲಿಕುಲದ ಅಪ್ರಮೇಯ ದಂಡನಾಯಕನು ಸದೆಬಡಿದು ಈ ಜಯಸ್ತಂಭವನ್ನು ನಿಲ್ಲಿಸಿದನೆಂದು ಶಾಸನದಲ್ಲಿ ದಾಖಲಿಸಲಾಗಿದೆ.

ಒಂದನೆಯ ರಾಜರಾಜನ ನಂತರ ಅಧಿಕಾರಕ್ಕೆ ಬಂದ ಒಂದನೆಯ ರಾಜೇಂದ್ರಚೋಳ (೧೦೧೨-೧೦೪೪)ನ ಕಾಲದ ನಾಲ್ಕು ಶಾಸನಗಳಲ್ಲಿ ಮೂರು ತಡಿಮಾಲಂಗಿಯಲ್ಲಿವೆ. ಈ ಅರಸನ ವಿಜಯಪುರದ ೧೦೧೮ರ ಶಾಸನ, ರಾಜೇಂದ್ರ ಚೋಳನು ಎಡತೊರೆನಾಡು, ಬನವಾಸಿ, ಕೊಳ್ಳಿಪಾಕೆಗಳನ್ನು ಜಯಿಸಿದ್ದ ಅಂಶವನ್ನು ದಾಖಲಿಸಿರುವುದು ಉಲ್ಲೇಖಾರ್ಹವಾಗಿದ್ದು, ಬೆಡಿಯಣ್ಣನ ಭೂದಾನವನ್ನೂ ಒಳಗೊಂಡಿದೆ. ಜನಾರ್ದನ ದೇವಾಲಯದ ತಳಪಾದಿ ಕಲ್ಲಿನ ಮೇಲಿರುವ ೧೦೨೨ರ ಶಾಸನದಿಂದ ಕುರವನ್ ಉಲಗಳಂದಾನ್ (ಭೂಮಿಯನ್ನಳೆವವನು) ಎಂದು ಕರೆಯಲಾದ ರಾಜೇಂದ್ರಚೋಳ ಜಯಮೂರನಾಡಾಳ್ವಾನ್ ಎಂಬ ಸೇನಾನಿಯು ರವಿಕುಲಮಾಣಿಕ್ಯ ದೇವಾಲಯಕ್ಕೆ ಬಿಟ್ಟ ಸುವರ್ಣದಾನವನ್ನು ತಿಳಿಸುತ್ತದೆ. ಒಂದನೆಯ ರಾಜರಾಜನ ಆಳ್ವಿಕೆಯ ೧೬ನೆಯ ವರ್ಷದಲ್ಲಿ ಆರಂಭಗೊಂಡ ಭೂಮೋಜಿಣಿ ಕಾರ್ಯವನ್ನು ಈತನು ಯಶಸ್ವಿಯಾಗಿ ಪೂರೈಸಿದ್ದರಿಂದ ಅವನಿಗೆ ಉಲಗಂಅಳಂದಾನ್ (ಭೂಮಿ ಅಳೆದವನು) ಎಂದು ಕರೆದಿರುವುದು ಉಲ್ಲಾಖಾರ್ಹವಾಗಿದೆ. ಅಲ್ಲದೇ ಇದೇ ಶಾಸನ, ಅರಸನ ಆಳ್ವಿಕೆಯ ಹದಿನಾಲ್ಕನೆಯ ವರ್ಷಕ್ಕೆ ಸೇರಿದ್ದು, (೧೦೨೬) ಮುಡಿಗೊಂಡ ಚೋಳಮಂಡಲಕ್ಕೆ ಸೇರಿದ ಗಂಗೈಕೊಂಡ ಚೋಳವಳನಾಡೊಳಗಣ ಇಡೈನಾಡಿನಲ್ಲಿದ್ದ



ಜನನಾಥಪುರ (ಮಾಯಿಲಂಗೆಯ)ದ ರವಿಕುಲಮಾಣಿಕ್ಯ ದೇವಾಲಯದ ನಂದಾದೀಪಸೇವೆ ಹಾಗೂ ತಿರುವೆಳಕ್ಕು ಉತ್ಸವಗಳನ್ನು ನಡೆಸಲು ಎರಡು ಮಾಡೈ ನೀಡಿದ್ದನ್ನು ದಾಖಲಿಸುತ್ತದೆ. 'ಗಂಗೈಕೊಂಡ ಚೋಳ' ಎಂಬುದು ಒಂದನೆಯ ರಾಜೇಂದ್ರಚೋಳನ ಬಿರುದುಗಳಲ್ಲಿ ಒಂದಾಗಿದ್ದು, ಅದನ್ನೇ ಒಂದು ನಾಡಿಗೆ ಹೆಸರಾಗಿ ಇಡಲಾಯಿತು. ಅದೇ ಗುಡಿಯಲ್ಲಿರುವ ಇನ್ನೊಂದು ಶಾಸನದಲ್ಲಿ ಒಂದನೆಯ ರಾಜೇಂದ್ರನು ಉತ್ತಮಚೋಳನೆಂದು ಬಿರುದಾಂಕಿತನಾಗಿದ್ದು, ಅವನ ಅಧಿಕಾರಿಯಾದ ವಿಚ್ಚಾದಿ ಅರೈನನು ರವಿಕುಲಮಾಣಿಕ್ಯ ದೇವರಿಗೆ, ಮಾಡೈಗೆ ತಿಂಗಳಿಗೆ ಒಂದು ಕುನ್ನಿಯಂತೆ ಮುಕ್ಕಾಲು ಹೊನ್ನು, ಮೂರು ಮಂಜಾಡಿ ಬಡ್ಡಿ ತರುವ ಮೂರು ಮುಡಿಗೊಂಡಚೋಳನ್ ಮಾಡೈನಾಣ್ಯಗಳನ್ನು ದತ್ತಿಬಿಟ್ಟ ಉಲ್ಲೇಖವಿದೆ. ಇದರಿಂದ ಒಂದು ಹೊನ್ನಿಗೆ ೨೦ ಮಂಜಾಡಿಗಳು, ಒಂದು ಮಂಜಾಡಿಗೆ ೨ ಕುನ್ನಿಗಳೂ ಸಮನಾಗಿದ್ದ ಅಂಶ ಸ್ಪಷ್ಟವಾಗುತ್ತದೆ. ಈ ದಾನದ ನಿರ್ವಹಣೆಯನ್ನು ತಡಿಮಾಲಂಗಿಯ ನಗರತ್ತರುಗಳಿಗೆ ವಹಿಸಿಕೊಡಲಾಗಿತ್ತು. ತಡಿಮಾಲಂಗಿಯ ಮಲ್ಲಿಕಾರ್ಜುನ ದೇವಾಲಯದ ತಳಪಾದಿಕಲ್ಲ ಮೇಲಿರುವ ೧೦೪೪ರ ಇನ್ನೊಂದು ಶಾಸನ, ಜನನಾಥಪುರದ ನಗರ್ತರು ತಮ್ಮೂರ ಶು(ಸಿ)ದ್ಧಮಲ್ಲೇಶ್ವರ ಮಹಾದೇವರ ಪೂಜಾವಿಧಿಗಳಿಗೆಂದು ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ.

ಇವನ ನಂತರ ಅಧಿಕಾರಕ್ಕೆ ಬಂದ ಒಂದನೆಯ ರಾಜಾಧಿರಾಜನ (೧೦೪೪-೫೪) ಕಾಲಕ್ಕೆ ಸೇರಿದ ಶಾಸನಗಳು ತಾಲೂಕಿನಲ್ಲಿಲ್ಲ. ಮುಂದೆ ಚೋಳಸಿಂಹಾಸನವನ್ನು ಏರಿದ ಇಮ್ಮಡಿ ರಾಜೇಂದ್ರ ಚೋಳ (೧೦೫೪-೬೪)ನು ಕಲ್ಯಾಣದ ಚಾಳುಕ್ಯ ಅರಸ ಒಂದನೆಯ ಸೋಮೇಶ್ವರನನ್ನು ಸೋಲಿಸಿ, ಯುದ್ಧರಂಗದಿಂದ ಹಿಮ್ಮೆಟ್ಟುವಂತೆ ಮಾಡಿದನೆಂಬ ಅಂಶವನ್ನು ಅನೇಕ ಚೋಳ ಶಾಸನಗಳು ದಾಖಲಿಸಿವೆ. ಇವನ ಆಳ್ವಿಕೆಗೆ ಸೇರಿದ ತಡಿಮಾಲಂಗಿಯ ಶಾಸನದಲ್ಲೂ ರಾಜೇಂದ್ರಚೋಳನು ಕೊಪ್ಪದಲ್ಲಿ ಆಹವಮಲ್ಲನನ್ನು ಸೋಲಿಸಿ, ಚಾಳುಕ್ಯ ಆನೆಗಳನ್ನು ಸದೆಬಡಿದು ರಟ್ಟಪಾಡಿ ಏಳೂವರೆ ಲಕ್ಷ ಪ್ರದೇಶವನ್ನು ಜಯಿಸಿ, ಕೊಲ್ಲಾಪುರದಲ್ಲಿ ವಿಜಯಸ್ತಂಭವನ್ನು ನಿಲ್ಲಿಸಿದ ಅಂಶವು ಉತ್ಪ್ರೇಕ್ಷಿಸಲ್ಪಟ್ಟಿದೆ. ಇವನ ನಂತರದ ಚೋಳ ಅರಸರಲ್ಲಿ ಒಂದನೆಯ ಕುಲೋತ್ತುಂಗನ ಕಾಲದ ಐದು ಶಾಸನಗಳು ತಾಲೂಕಿನಲ್ಲಿವೆ. ಅವುಗಳಲ್ಲಿ ದೊಡ್ಡಬಾಗಿಲು, ತಲಕಾಡು (೧೧೦೨-೦೩) ಹಾಗೂ ತಡಿಮಾಲಂಗಿ (೧೧೦೫-೦೬)ಯ ಶಾಸನಗಳು ಬಹಳ ಹಾಳಾಗಿದ್ದು, ಅರಸನ ಉಲ್ಲೇಖ ಹಾಗೂ ಆಳ್ವಿಕೆಯ ವರ್ಷವಿರುವ ಭಾಗವಷ್ಟೆ ಉಳಿದಿವೆ. ಈ ಎಲ್ಲಾ ಶಾಸನಗಳ ಭಾಷೆ ತಮಿಳಾಗಿದ್ದು, ಗ್ರಂಥಲಿಪಿಯಲ್ಲಿವೆ. ಮುಂದೆ ಸುಮಾರು ೧೧೧೬ರಲ್ಲಿ ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ತಲಕಾಡಿನಿಂದ ಹೊರದಬ್ಬುವಲ್ಲಿ ಯಶಸ್ವಿಯಾಗಿ, ಹೊಯ್ಸಳರ ಆಳ್ವಿಕೆಗೆ ಗಂಗವಾಡಿ ಪ್ರದೇಶವು ಒಳಪಟ್ಟಿತು. ನರಸೀಪುರದ ೧೨೬೦ರ ತಾಮ್ರಶಾಸನವು, ಚೋಳ ಮುಮ್ಮಡಿ ರಾಜೇಂದ್ರನ ಆಳ್ವಿಕೆಗೆ ಸೇರಿದ ಕೋಲಾರ ಜಿಲ್ಲೆಯ ಕೈವಾರನಾಡಿನ ಕೊಳತ್ತೂರು ಗ್ರಾಮದಲ್ಲಿ ಭೂದಾನ ಬಿಟ್ಟ ಅಂಶವನ್ನು ದಾಖಲಿಸಿದ್ದು, ಈ ಶಾಸನಕ್ಕೂ ನರಸೀಪುರ ತಾಲೂಕಿಗೂ ಏನೇನೂ ಸಂಬಂಧವಿಲ್ಲ.

**ಹೊಯ್ಸಳರು :** ಸುಮಾರು ಮೂರು ಶತಮಾನಗಳ ಕಾಲ ರಾಜ್ಯಭಾರ ನಡೆಸಿದ ಹೊಯ್ಸಳರ ಉಲ್ಲೇಖವಿರುವ ಮೊದಲ ಶಾಸನ, ತಾಲೂಕಿನ ಕಲಿಯೂರಿನಲ್ಲಿದೆ. ಕಲಿಯೂರಿನ ೧೦೦೬ರ ಶಾಸನದಲ್ಲಿ ಚೋಳ ದಂಡನಾಯಕ ಅಪ್ರಮೇಯನ ಕೈಯಲ್ಲಿ ಸೋತ ಗಂಗಸಾಮಂತರಲ್ಲಿ ಒಬ್ಬನಾದ ಪೊಯ್ಸಳನ ಉಲ್ಲೇಖವೂ ಇದೆ. ಅಲ್ಲಿಂದ ಸುಮಾರು ಒಂದು ಶತಮಾನಕ್ಕೂ ಸ್ವಲ್ಪ ಹೆಚ್ಚು ಕಾಲ (೧೧೧೬)ಚೋಳರ ಆಳ್ವಿಕೆಗೆ ಒಳಪಟ್ಟಿದ್ದ ಗಂಗವಾಡಿಯನ್ನು ಹೊಯ್ಸಳ ವಿಷ್ಣುವರ್ಧನನು ೧೧೧೪–೧೬ರಲ್ಲಿ ವಶಪಡಿಸಿಕೊಂಡನು. ಆವರೆಗೆ ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದ ಹೊಯ್ಸಳರು, ವಿಷ್ಣುವರ್ಧನನ ಈ ದಿಗ್ವಿಜಯದಿಂದ ಸ್ವತಂತ್ರರಾಗಲು ಯತ್ನಿಸಿದರಾದರೂ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನೆದುರು ಅದು ವಿಫಲವಾಯಿತು. ವಿಷ್ಣುವರ್ಧನನ ಆಳ್ವಿಕೆಗೆ ಸೇರಿದ ತೇದಿಯುಳ್ಳ ಶಾಸನಗಳು ತಲಕಾಡು (೧೧೧೭), ಬನ್ನೂರು (೧೧೩೫) ಗಳಿಂದಲೂ ಹಾಗೂ ಎರಡು ತೇದಿರಹಿತ ಶಾಸನಗಳು ತಲಕಾಡಿನಿಂದಲೂ ವರದಿಯಾಗಿವೆ. ತಲಕಾಡಿನ ಶಾಸನದಿಂದ, ಚೋಳರ ದಂಡನಾಯಕ ಆದಿಯಮ್ಮನೂ ಸೇರಿದಂತೆ ಚೋಳ ಸೈನ್ಯವನ್ನು ಸಂಪೂರ್ಣ ಸೋಲಿಸಿ ತಲಕಾಡುಗೊಂಡ ಮುಂತಾದ ಬಿರುದುಗಳನ್ನು ಧರಿಸಿದ ವಿಷ್ಣುವರ್ಧನನು ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ನಿರ್ಮಿಸಿ, ಅದರ ಪೂಜಾವಿಧಿ ಹಾಗೂ ತಿರುವಿಡಿಯಾಟಕ್ಕೆಂದು ಕುಕ್ಕೂರು, ಕಿರುವಿಣ್ಣಾಗರ, ಒಡಪ್ಪಟ್ಟಿ ಹಾಗೂ ವಾಗಿಯೂರು ಗ್ರಾಮಗಳನ್ನು ಸರ್ವಮಾನ್ಯವಾಗಿ ದತ್ತಿ ಬಿಟ್ಟ ಅಂಶ ವೇದ್ಯವಾಗುತ್ತದೆ. ಅಲ್ಲದೆ ಹೊಯ್ಸಳರ ಮೂಲಕ್ಕೆ ಸಂಬಂಧಿಸಿದಂತೆ, ಪೌರಾಣಿಕ ವಿವರಣೆಯನ್ನು ನೀಡುವ ಈ ಶಾಸನದಲ್ಲಿ ವಿಷ್ಣುವರ್ಧನನ ಮಗ ನರಸಿಂಹ, ಸೊಸೆ ಏಚಲಾದೇವಿ ಹಾಗೂ ಮೊಮ್ಮಗ ವೀರಬಲ್ಲಾಳರ ಉಲ್ಲೇಖವೂ ಇದೆ. ಇದರಿಂದ ಈ ಶಾಸನವನ್ನು ಇಮ್ಮಡಿ ಬಲ್ಲಾಳನ ಆಳ್ವಿಕೆಯ ಸಂದರ್ಭದಲ್ಲಿ (೧೧೭೩) ನೀಡಲಾಗಿದೆಯೆಂದು ಬಿ.ಆರ್.ಗೋಪಾಲ್ ಅಭಿಪ್ರಾಯಪಡುತ್ತಾರೆ. ವಿಷ್ಣುವರ್ಧನನ ಆಡಳಿತಕ್ಕೆ ಸೇರಿದ ಬನ್ನೂರಿನ ೧೧೩೫ರ ಶಾಸನ, ಜನನಾಥಚತುರ್ವೇದಿಮಂಗಲ ಎಂಬ ಅಭಿದಾನವನ್ನು ಹೊಂದಿದ್ದ ಬನ್ನಿಯೂರಿ (ಬನ್ನೂರು)ನ ೧೭೦೦ ಮಹಾಜನರ ಸಮ್ಮುಖದಲ್ಲಿ ಬೆಳ್ವಲ ನಾಡಿನ ಬಾದಾಮಿಯ ಹೂವಿಯರ ನರಸಿಂಹದೇವನು ವಿಷ್ಣು ಹಾಗೂ ಜನಾರ್ದನ ದೇವರ ನಂದಾದೀಪಕ್ಕೆಂದು ತಲಾ ಮೂರ್ಮೂರು ಗದ್ಯಾಣವನ್ನೂ, ಮಹಾಜನರು ನಡೆಸುತ್ತಿದ್ದ ಸಂಜೆಮಟದ ಅಗ್ಗಿಷ್ಟಿಕೆಗೆ ನಾಲ್ಕು ಗದ್ಯಾಣವನ್ನೂ ಹಾಗೂ ಉಭಯ ಪರ್ವಗಳಲ್ಲಿ ನಡೆಯುವ ಸೌಪರ್ಣದ ತಾಂಬೂಲ ಸೇವೆಗೆಂದು ಎರಡು ಗದ್ಯಾಣ(ಎಲ್ಲಾ ಸೇರಿ ಒಟ್ಟು ೧೨)ಗಳಿಂದ ತಿಂಗಳಿಗೆ ಹೊಂಗದ್ಯಾಣಕ್ಕೆ ಹಾಗ ಬಡ್ಡಿಯಂತೆ ಬರುವ ೧೨ ಹಾಗಗಳನ್ನು ಬಳಸಿಕೊಳ್ಳಲೆಂದು ಬಿಟ್ಟ ೧೨ ಗದ್ಯಾಣಗಳ ಪುದುವೊಟ್ಟಿನ ಬಗ್ಗೆ ತಿಳಿಸುತ್ತದೆ. ಇದರಿಂದ ಸಂಜೆಮಠದಲ್ಲಿ ಶಿಕ್ಷಣ ಸೇವೆ ಲಭ್ಯವಿದ್ದು, ಅದನ್ನು ಊರ ಮಹಾಜನರೇ ನಿರ್ವಹಿಸುತ್ತಿದ್ದ ಅಂಶ ವೇದ್ಯವಾಗುತ್ತದೆ. ವಿಷ್ಣುವರ್ಧನನ ಆಳ್ವಿಕೆಗೆ ಸೇರಿದ್ದೆಂದು ಊಹಿಸಲಾಗಿರುವ ತಲಕಾಡಿನ ಶಾಸನಗಳಲ್ಲೊಂದು ಅಲ್ಲಿನ ಕೀರ್ತಿನಾರಾಯಣದೇವರಿಗೆ ನರ್ತಕಿಯೊಬ್ಬಳು ನಗರದ ಮಂಡಲಸ್ವಾಮಿಯಿಂದ ಭೂಮಿಯನ್ನು ಖರೀದಿಸಿ ದಾನ ಬಿಟ್ಟ ಅಂಶವನ್ನು ತಿಳಿಸಿದರೆ,



ಇನ್ನೊಂದು ಶಾಸನ ಅದೇ ನರ್ತಕಿಯು ನಾಲ್ಕು ಕಲಂಜು ಚಿನ್ನವನ್ನು ವೆಚ್ಚ ಮಾಡಿ ಎಂಬೆರುಮಾನ(ರಾಮಾನುಜ)ರ್ ಜೊತೆಗೆ ದೇವಿಯ ವಿಗ್ರಹವನ್ನೂ ಮಾಡಿಸಿ, ಅದನ್ನು ಕೀರ್ತಿನಾರಾಯಣ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ಅಂಶವನ್ನು ದಾಖಲಿಸಿದೆ. ಮೈಸೂರು ತಾಲೂಕಿನ ಕುಮಾರಬೀಡು (೧೧೨೧) ಶಾಸನ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ–೯೬೦೦೦ ನಾಡನ್ನು ರಾಜಧಾನಿ ತಲಕಾಡಿನಿಂದ ಆಳುತ್ತಿದ್ದನೆಂಬ ಅಂಶವನ್ನು ದಾಖಲಿಸಿರುವುದು ಉಲ್ಲೇಖಾರ್ಹವಾಗಿದೆ.

ವಿಷ್ಣುವರ್ಧನನ ನಂತರ ಅಧಿಕಾರಕ್ಕೆ ಬಂದ ಒಂದನೆಯ ನರಸಿಂಹನ ತಲಕಾಡು ಶಾಸನ (೧೧೬೦), ಕಿರುನಗರ (ವಿಜಯಪುರ)ದ ಗೌಡರಿಂದ ಭೂಮಿ ಖರೀದಿಸಿ, ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಇಮ್ಮಡಿ ಬಲ್ಲಾಳನ ಆಡಳಿತಕ್ಕೆ ಸೇರಿದ ೧೬ ಶಾಸನಗಳು ಈವರೆಗೂ ಈ ತಾಲೂಕಿನಲ್ಲಿ ಲಭಿಸಿವೆ. ಅವುಗಳಲ್ಲಿ ತಲಕಾಡಿನ ೧೧೭೩ರ ಶಾಸನ, ಅರಸನು ತನ್ನ ಪಟ್ಟಬಂಧ ಮಹೋತ್ಸವ ಸಂದರ್ಭದಲ್ಲಿ, ತಲಕಾಡಿನ ಕೀರ್ತಿನಾರಾಯಣದೇವರ ಸೇವೆಗೆಂದು ಪದಿನಾಡಿನ ಇಳಮರದೂರು (ಇಂದಿನ ಯಳಂದೂರು) ಗ್ರಾಮವನ್ನು ಸರ್ವಮಾನ್ಯವಾಗಿ ದಾನಬಿಟ್ಟ ಅಂಶವನ್ನು ದಾಖಲಿಸಿದರೆ, ಮೂಗೂರಿನ ೧೧೭೭ರ ಶಾಸನದಿಂದ ಮಾರಿನಂಬಿಗೆ ಎರಡು ವೆಲಿ ಭೂಮಿಯನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ. ೧೧೭೯ರಲ್ಲಿ ನೀಡಲ್ಪಟ್ಟಿರುವ ಮೂರು ಶಾಸನಗಳಲ್ಲಿ ಕಾರಗಹಳ್ಳಿ ಶಾಸನ, ಕೊಳಲ್ತೂರ ಸೋಮೇಶ್ವರ ದೇವರ್ಗೆ ಕಲ್ಲುಗಾಣ ಮಾಡಿಸಿದ್ದನ್ನು ದಾಖಲಿಸಿದರೆ, ಮುಡುಕತೊರೆ ಬೆಟ್ಟದ ಹಿಂಬದಿಯ ಹೊಲದಲ್ಲಿರುವ ಇನ್ನೊಂದು ಶಾಸನ, ವೆಟ್ಟಪಳ್ಳಿಯ ಸಮೀಪದ ಬೆಟ್ಟದ ಮೇಲಿನ ಮಲ್ಲಿಕಾರ್ಜುನದೇವರ್ಗೆ ಪೆರ್ಗಡೆ ವೈಚಪ್ಪ ಹಾಗೂ ರಾಮಯ್ಯರು ಭೂದಾನ ಬಿಟ್ಟ ಅಂಶವನ್ನೂ ಉಲ್ಲೇಖಿಸುತ್ತದೆ. ಇದೇ ತೇದಿಗೆ ಸೇರಿದ ಅಕ್ಕೂರಿನ ಶಾಸನ, ಬಾಚಯ್ಯ ನಾಯಕ, ಹೆಗ್ಗಡೆ ಮಾರಯ್ಯ ಹಾಗೂ ಇತರರು ಅಕ್ಕಿಯೂರ ಚೋಳಪಾಂಡೇಶ್ವರ ದೇವರ್ಗೆ ಗಾಣದ ಸುಂಕದೊಂದಿಗೆ ಮನೆಗೊಂದು ಹಾಗ ಹರಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ತುಂಬಲದ ೧೧೮೦ರ ಎರಡು ಶಾಸನಗಳು ತಿರುಮಕೂಡಲಿನ ಅಗಸ್ತ್ಯೇಶ್ವರ ದೇವರ ಸೇವೆಗೆಂದು ಎಡತೊರೆನಾಡ ತುಂಬಲ ಮತ್ತದರ ನಾಲ್ಕು ಕಾಲುವಳ್ಳಿ (ಉಪಗ್ರಾಮ)ಗಳನ್ನು ಅರಸನು ದಾನ ಬಿಟ್ಟ ಅಂಶವನ್ನು ದಾಖಲಿಸಿದರೆ, ತಲಕಾಡಿನ (೧೧೮೦) ಶಾಸನದಿಂದ ಅರಸನು ಕೀರ್ತಿನಾರಾಯಣದೇವರ ಅರ್ಚಕರ ನಡುವೆ ಉದ್ಭವಿಸಿದ್ದ ಪ್ರಸಾದ ಹಂಚಿಕೆ ಸಮಸ್ಯೆಯನ್ನು ಬಗೆಹರಿಸಿದ ಅಂಶ ವೇದ್ಯವಾಗುತ್ತದೆ. ತಿರುಮಕೂಡಲು ನರಸೀಪುರದ ೧೧೮೮ರ ಶಾಸನದಿಂದ, ತಲಕಾಡುಗೊಂಡ ಅಭಯವಲ್ಲಭದೇವನು, ಆಲ್ಗೋಡಿನ ವಿಣ್ಣಾಗರ್‌ದೇವರ ಸೇವೆಗೆಂದು ಶ್ರೀರಾಮಚತುರ್ವೇದಿಮಂಗಲವಾದ ಪುಣಿಶೆಯೂರ ಮಹಾಸಭೆಯಿಂದ ಭೂಮಿಯನ್ನು ಖರೀದಿಸಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇದೇ ತೇದಿಯಲ್ಲಿರುವ ಬನ್ನೂರಿನ ಶಾಸನದಿಂದ, ಅಲ್ಲಿನ ದೇವಾಲಯವೊಂದಕ್ಕೆ ಮಹಾಜನರೂ ಸೇರಿದಂತೆ ಸಾರ್ವಜನಿಕರು ದಾನ ಬಿಟ್ಟ ಅಂಶ ಗೊತ್ತಾದರೆ, ತಲಕಾಡಿನ ಇನ್ನೊಂದು ಶಾಸನವು ದೇವರ ಪ್ರಸಾದದ ವಿನಿಯೋಗಕ್ಕೆ ಸಂಬಂಧಿಸಿದಂತೆ ಮಾಡಿದ

ವ್ಯವಸ್ಥೆಯನ್ನು ದಾಖಲಿಸುತ್ತದೆ. ತಡಿಮಾಲಂಗಿಯ ೧೧೯೬ರ ಶಾಸನದಲ್ಲಿ ಅರಸನು ಎಲಬುರಿಗೆಯಲ್ಲಿ ತಂಗಿದ್ದಾಗ ಮಾಲಂಗಿಯ ಜನಾರ್ದನ ದೇವರ ಪೂಜಾವಿಧಿಗೆಂದು ಸಾತನೂರಿನಿಂದಾಳುತ್ತಿದ್ದ ಆರ್ಮಟಿಮಲ್ಲ ದಂಡನಾಯಕನು ದಾನಬಿಟ್ಟ ಅಂಶ ಗೊತ್ತಾಗುತ್ತದೆ. ಬನ್ನೂರಿನ ೧೨೦೨ರ ಶಾಸನ ೩೫ ಗದ್ಯಾಣಗಳನ್ನು ಅಗಸ್ತೇಶ್ವರ ಭಟ್ಟರಿಗೆ ಪೂಜಾವಿಧಿಗೆಂದು ಗೋವಿಂದರಭಟ್ಟನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಇದೇ ಅರಸನ ಕಾಲಕ್ಕೆ ಸೇರಿದ ತೇದಿರಹಿತ ಶಾಸನಗಳು ಬನ್ನೂರು, ಚಿದರಳ್ಳಿ ಹಾಗೂ ವಿಜಯಪುರಗಳಿಂದ ವರದಿಯಾಗಿದ್ದು, ಚಿದರಳ್ಳಿಯ ಶಾಸನದಿಂದ ತಲಕಾಡಿನ ನಖರರು ಹಾಗೂ ಕಲ್ಕುಣಿಯ ಕಲ್ಲುವಡ್ಡರು ಏಕಸ್ಥರಾಗಿ ಮನೆ, ಕೆರೆ ಹಾಗೂ ಗದ್ದೆಗಳನ್ನು ದಾನ ಬಿಟ್ಟ ಅಂಶ ಸ್ಪಷ್ಟವಾಗುತ್ತದೆ. ಈ ದಾನವನ್ನು ಶಾಸನವಿರುವ ಚಿದರಳ್ಳಿಯ ಸೋಮೇಶ್ವರ ದೇವರ ಸೇವೆಗೆಂದು ಬಿಟ್ಟಿರುವಂತೆ ತೋರುತ್ತದೆ.

ಇಮ್ಮಡಿ ಬಲ್ಲಾಳನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ, ತಾಲೂಕಿನ ಏಕೈಕ ಶಾಸನವು ತಲಕಾಡಿನಲ್ಲಿದ್ದು, ಪುರಾಣ ಪ್ರಸಿದ್ಧನಾದ ನರಸಿಂಹನು ಅಚೇತನವಾದ ಸ್ತಂಭದಿಂದ ಉದ್ಭವಿಸಿದರೆ, ಈ ನರಸಿಂಹನು (ಮುಮ್ಮಡಿ ನರಸಿಂಹನು) ಬಲ್ಲಾಳನೆಂಬ ಚೇತನ ಸ್ತಂಭದಿಂದ ಜನಿಸಿದನೆಂಬ ಅಂಶವನ್ನು ಕಾವ್ಯಮಯವಾಗಿ ದಾಖಲಿಸಿದೆ. ಇವನ ನಂತರ ಅಧಿಕಾರಕ್ಕೆ ಬಂದ ಸೋಮೇಶ್ವರನ ಕಾಲಕ್ಕೆ ಸೇರಿದ ಜೋಡಿ ಬಸವನಪುರದ ೧೨೩೬ರ ಶಾಸನದಿಂದ ಹಿಂದೆ ವಾಸುದೇವನು ಇಟ್ಟಿಗೆ ಬಳಸಿ ನಿರ್ಮಿಸಿದ್ದ ಹರಿಹರ ದೇವಾಲಯವನ್ನು ಅವನ ಮೊಮ್ಮಗನಾದ ಕೇಶವದೇವನು ಶಿಲಾಮಯಗೊಳಿಸಿ, ದುರ್ಗೀಶ್ವರ ದೇವರ್ಗೆ ಗೋಪುರ, ನಂದಿ ಹಾಗೂ ಮಕರತೋರಣಗಳನ್ನು ಮಾಡಿಸಿದ ಅಂಶ ವೇದ್ಯವಾಗುತ್ತದೆ. ಇದೇ ತೇದಿಯ ತಲಕಾಡು ಶಾಸನ, ತಲಕಾಡಿನ ಕೀರ್ತಿನಾರಾಯಣದೇವರ ನಂದಾದೀಪಕ್ಕೆಂದು ಏಳು ಗದ್ಯಾಣಗಳನ್ನು ಗೋವಿಂದನಾಯಕನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಇದೇ ಅರಸನಿಗೆ ಸೇರಿದ ಬನ್ನೂರಿನ ೧೨೪೬ರ ಶಾಸನ, ಬನ್ನೂರಿನ ಚೆನ್ನಗೋಪಿನಾಥ ದೇವರ ಸೇವೆಗೆಂದು ನಾಲ್ಕು ಗದ್ಯಾಣವನ್ನು ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ.

ಇವನ ನಂತರ ಅಧಿಕಾರಕ್ಕೆ ಬಂದ ಮುಮ್ಮಡಿ ನರಸಿಂಹನ ಆಳ್ವಿಕೆಗೆ ಸೇರಿದ ೧೬ ಶಾಸನಗಳು, ಈ ತಾಲೂಕಿನ ಮೂಗೂರು (೧೨೬೧, ೧೨೭೭, ೧೨೭೯), ಸೋಮನಾಥಪುರ (೧೨೬೮–೭೯), ವಿಜಯಪುರ (೧೨೭೦), ಆಲ್ಗೋಡು (೧೨೭೮), ಕಾವೇರಿಪುರ (೧೨೮೮), ಹಾಗೂ ತಡಿಮಾಲಂಗಿ (೧೨೯೦) ಗಳಿಂದ ವರದಿಯಾಗಿವೆ. ಇವುಗಳಲ್ಲಿ ಮೂಗೂರಿನ ೧೨೬೧ರ ಶಾಸನ, ತಿಬ್ಬವ್ವೆದೇವಿಯ ನಂದಾದೀಪದ ಎಣ್ಣೆಗೆಂದು ಸಂಕಣ್ಣನು, ವರ್ಷಕ್ಕೆ ಒಂದು ಗದ್ಯಾಣ ಎರಡು ಪಣಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಸೋಮನಾಥಪುರದ ಐದು ಶಾಸನಗಳಲ್ಲಿ ದಂಡನಾಯಕ ಸೋಮಯ್ಯನು ಸರ್ವನಮಸ್ಯದ ಅಗ್ರಹಾರ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರವನ್ನು ೧೨೬೮ರಲ್ಲಿ ಸ್ಥಾಪಿಸಿ, ಅಗ್ರಹಾರದ ಮಧ್ಯಭಾಗದಲ್ಲಿ ಕೇಶವ, ಗೋಪಾಲ ಹಾಗೂ ಜನಾರ್ದನ ದೇವರುಗಳನ್ನುಳ್ಳ ತ್ರಿಕೂಟಾಚಲವನ್ನು ಬ್ರಹ್ಮಾದಿ ಉಪದೇವತೆ, ಪರಿವಾರ



ದೇವತಾಮೂರ್ತಿಗಳೊಂದಿಗೆ ೧೨೭೬ರ ವೇಳೆಗೆ ನಿರ್ಮಿಸಿ ದಾನ ಬಿಟ್ಟ ಅಂಶವನ್ನು ದಾಖಲಿಸಿದರೆ, ದೇವಾಲಯದ ಭಿತ್ತಿಶಿಲ್ಪಗಳ ಬುಡದಲ್ಲಿರುವ ವಿವಿಧ ನಾಮಾಂಕಿತ ಶಾಸನಗಳಿಂದ ಮಲಿತಮ್ಮ, ಬಲ್ಲೆಹ, ಮಸಣಿತಮ್ಮ ಚಾಮಯ್ಯ, ಚೌಡಯ್ಯ ಮುಂತಾದ ಶಿಲ್ಪಿಗಳೂ ಈ ದೇವಾಲಯವನ್ನು (೧೨೬೮–೭೬) ಮಲಿತಮ್ಮನ ರೂವಾರಿತ್ವದಲ್ಲಿ ಪೂರ್ಣಗೊಳಿಸಿದ ಅಂಶ ದಾಖಲಿಸಲ್ಪಟ್ಟಿದೆ. ಅಲ್ಲದೆ ಅಲ್ಲಿನ ಕಾವೇರಿ ತೀರದ ಲಕ್ಷ್ಮೀನರಸಿಂಹ ಹಾಗೂ ಯೋಗನರಸಿಂಹದೇವರುಗಳಿಗೂ, ಪಂಚಲಿಂಗ ದೇವರಿಗೂ ದಾನ ಬಿಟ್ಟಿದ್ದ ಅಂಶ ೧೨೬೯ರ ಶಾಸನದಿಂದ ಸ್ಪಷ್ಟವಾಗುತ್ತದೆ. ಉಳಿದೆರಡು ಶಾಸನಗಳು ಸೋಮನಾಥಪುರದ ದೇವಾಲಯಗಳಿಗೆ ಬಿಟ್ಟ ಪ್ರತ್ಯೇಕ ದತ್ತಿಗಳಾಗಿವೆ. ಪಂಚಲಿಂಗದೇವರ ಗುಡಿ ಮುಂದಿರುವ ೧೨೬೯ರ ಶಾಸನದಿಂದ, ಆ ದೇವಾಲಯದಲ್ಲಿ ಹಿಂದೆ ಬಿಜ್ಜಲೇಶ್ವರ, ಹೆಮ್ಮೇಶ್ವರ, ರೇವಳೇಶ್ವರ, ಸೋಮನಾಥ ಹಾಗೂ ಭೈರವೇಶ್ವರ ದೇವರುಗಳನ್ನು ಪ್ರತಿಷ್ಠಾಪಿಸಿದ್ದ ಅಂಶ ವೇದ್ಯವಾಗುತ್ತದೆ.

ಮೂಗೂರಿನ ೧೨೭೭ರ ಶಾಸನ, ಊರ ಪ್ರಭುಗಳು ಮೂಗೂರಿನಲ್ಲಿ ಪಟ್ಟಣವನ್ನು ನಿರ್ಮಿಸಿ, ಸಂತೆಯನ್ನು ಆರಂಭಿಸಿ, ಬೇಕಾದ ಸೌಕರ್ಯವನ್ನು ಊರಗೌಡ ಹಾಗೂ ಸ್ಥಳದ ಸೆಟ್ಟಿಯರಿಗೆ ನೀಡಿದ್ದು, ಒಂಭತ್ತು ಕೈಯಳತೆಯ ಮನೆಯನ್ನು ಮಾಡುವವರಿಗೆ ಮೊದಲ ವರ್ಷ ಮನೆದೆರೆ ಮನ್ನಾ ಹಾಗೂ ಪಟ್ಟಣದಲ್ಲಿ ಹೊಸದಾಗಿ ಬಂದು ನೆಲಸುವವರಿಗೆ ಎರಡು ವರ್ಷ ಮನೆದೆರೆಯನ್ನು ಮನ್ನಾ ಮಾಡಿದ ಅಪರೂಪದ ಅಂಶವನ್ನು ದಾಖಲಿಸಿದೆ. ಆಲ್ಗೋಡಿನ ೧೨೭೮ರ ಶಾಸನದಲ್ಲಿ ಅರ್ಕಸಾಲೆ ಭೋಗಾಚಾರಿಯು ನಿರ್ಮಿಸಿಕೊಟ್ಟ ದೇವಾಲಯದ ಪ್ರಸ್ತಾಪವಿದೆ. ಮೂಗೂರಿನ ೧೨೭೯ರ ಶಾಸನ ಅಲ್ಲಿನ ದೇಶಿನಾಥದೇವರಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸಿದರೆ ಇನ್ನೊಂದು ಶಾಸನ ಮೂಗೂರಿನ ಅಳಗಪೆರುಮಾಳ್ ದೇವರ ಸೇವೆಗೆಂದು ವಿವಿಧ ತೆರಿಗೆಗಳನ್ನು ಮಹಾಪ್ರಭು ಡಾಲಿಗೌಡನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಕಾವೇರಿಪುರದ ೧೨೮೮ರ ಶಾಸನ, ಹೊಂಗಲವಾಡಿಯ ಗೌಡ–ಅಧಿಕಾರಿಗಳ ಕೋರಿಕೆಯಂತೆ ಅರಸನು ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ತಡಿಮಾಲಂಗಿಯ ೧೨೯೦ರ ಶಾಸನದಿಂದ ಸರ್ವನಮಸ್ಯದಗ್ರಹಾರ, ದಕ್ಷಿಣವಾರಣಾಸಿ ಉದ್ಭವ ಸರ್ವಜ್ಞ ಶ್ರೀರಂಗಪುರವಾದ ತಡಿಮಾಲಂಗಿಯಲ್ಲಿ ಪೆರುಮಾಳೆ ದಂಡನಾಯಕನು ಆರಂಭಿಸಿದ ಪಾಠಶಾಲೆಯಲ್ಲಿ ಖಂಡಿಕ, ಬಾಲಶಿಕ್ಷೆಗಳಿಗೆಂದು ಋಗ್ವೇದ ಓದಿಸುವ ಉಪಾಧ್ಯಾಯ, ನಾಗರಿ–ಕನ್ನಡ ಹಾಗೂ ತಿಗುಳಾರ್ಯವನ್ನೋದಿಸುವ ಬಾಲಶಿಕ್ಷಾ ಉಪಾಧ್ಯಾಯರ ಜೀವಿತಕ್ಕೆಂದು ವರ್ಷಕ್ಕೆ ತಲಾ ಆರಾರು ಗದ್ಯಾಣವನ್ನು ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ.

ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ಹತ್ತಕ್ಕೂ ಹೆಚ್ಚು ಶಾಸನಗಳು (೧೨೯೦–೧೩೪೨) ಈ ತಾಲೂಕಿನಲ್ಲಿ ಲಭಿಸಿವೆ. ಅವುಗಳಲ್ಲಿ ಸೋಮನಾಥಪುರದ ೧೩೦೦ರ ಶಾಸನ ಅಲ್ಲಿನ ಪಂಚಲಿಂಗದೇವರು, ಪ್ರಸನ್ನಕೇಶವದೇವರು, ಹೊಳೆಯ ನಾರಸಿಂಹ, ಲಕ್ಷ್ಮೀನರಸಿಂಹ, ಮಳವಳ್ಳಿಯ ಸಾರಂಗಪಾಣಿ ಹಾಗೂ ತಲಕಾಡಿನ ಕೀರ್ತಿನಾರಾಯಣ ದೇವರುಗಳ ರಕ್ಷಣೆ ಪೂಜಾವಿಧಿಗಳಿಗೆಂದು ದತ್ತಿಬಿಟ್ಟ ಅಂಶವನ್ನು ತಿಳಿಸಿದರೆ,

ಜೋಡಿಬಸವನಪುರದ ೧೩೦೧ರ ಶಾಸನ, ಅಲ್ಲಿದ್ದ ದುರ್ಗೀಶ್ವರ ದೇವರ ನಂದಾದೀಪಕ್ಕೆಂದು ನಾಲ್ಕು ಗದ್ಯಾಣವನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಕುರುಬೂರಿನ ೧೩೦೭ರ ಶಾಸನ, ಕುರುಬೂರ ಹೆಗ್ಗೇಶ್ವರ ದೇವರ ನಂದಾದೀಪಕ್ಕೆಂದು ತಿಕ್ಕಯ್ಯಹೆಗಡೆಯು ಗಾಣಸುಂಕವನ್ನು ಮನ್ನಾ ಮಾಡಿದ ಅಂಶವನ್ನು ಉಲ್ಲೇಖಿಸಿದರೆ, ಹಿರಿಯೂರಿನ ೧೩೦೯ರ ಶಾಸನದಿಂದ, ಊರ ಗೌಡರು ಕೃಷಿ ಅಭಿವೃದ್ಧಿಗಾಗಿ ಮೂರು ವರ್ಷದ ಶ್ರೇಣೀಕೃತ ತೆರಿಗೆ ಆಧಾರದ ಮೇಲೆ ಮಾದಾಪುರ ಗ್ರಾಮವನ್ನು ಮೂವರು ಗೌಡರಿಗೆ ದತ್ತಿ ಬಿಟ್ಟ ಅಪರೂಪದ ಅಂಶವನ್ನು ದಾಖಲಿಸಿದೆ. ತಲಕಾಡು ಹಾಗೂ ಹೊಂಗಲವಾಡಿಯ ತೇದಿರಹಿತ ಶಾಸನಗಳು ಆಯಾಸ್ಥಳದ ದೇವಾಲಯಗಳ ಸೇವೆಗೆಂದು ದಾನ ಬಿಟ್ಟ ಅಂಶವನ್ನು ದಾಖಲಿಸುತ್ತವೆ. ಇದೇ ಅರಸನಿಗೆ ಸೇರಿದ ಬೆಟ್ಟಹಳ್ಳಿಯ ಎರಡು ಶಾಸನಗಳಲ್ಲೊಂದು ಗಾಣದ ಬಗ್ಗೆ ಪ್ರಸ್ತಾಪಿಸಿದರೆ, ಇನ್ನೊಂದು ಬೆಟ್ಟಹಳ್ಳಿಯ ಕೆರೆಯ ಕೆಳಗಿದ್ದ ದಾನಭೂಮಿಯ ಬೆಲೆಯನ್ನು ಪಡೆದ ತಲಕಾಡಿನ ನಗರ್ತರು, ಅದನ್ನು ಬಹುಶಃ ಮಲ್ಲಿಕಾರ್ಜುನದೇವರಿಗೆ ದಾನ ಬಿಟ್ಟಿರುವಂತೆ ತೋರುತ್ತದೆ. ಸುಮಾರು ೧೩–೧೪ನೇ ಶತಮಾನಕ್ಕೆ ಸೇರಿದ ಇನ್ನೂ ಅನೇಕ ಹೊಯ್ಸಳ ಶಾಸನಗಳು ತಾಲೂಕಿನಲ್ಲಿ ಲಭಿಸಿದ್ದರೂ, ಅರಸರ ಉಲ್ಲೇಖ ಇಲ್ಲವೇ ತೇದಿ ಇಲ್ಲದಿರುವುದರಿಂದ ಅವುಗಳನ್ನು ಹೊಯ್ಸಳ ಶಾಸನಗಳೆಂದು ಖಚಿತವಾಗಿ ಹೇಳಲಾಗದಿದ್ದರೂ ಸಾಂದರ್ಭಿಕ ಆಧಾರಗಳಿಂದ ಗುರುತಿಸಬಹುದಾಗಿದೆ.

**ವಿಜಯನಗರ ಅರಸರು (೧೩೩೬–೧೫೬೫) :** ವಿಜಯನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಮುನ್ನೂರು ವರ್ಷಗಳು (೧೩೩೬–೧೫೬೫) ರಾಜ್ಯಭಾರ ಮಾಡಿದ ಸಂಗಮ, ಸಾಳುವ, ತುಳುವ ಮತ್ತು ಅರವಿಡು ವಂಶಗಳು ಪ್ರಮುಖವಾಗಿದ್ದವು. ಈ ವಂಶಗಳ ಹಲವಾರು ಶಿಲಾಶಾಸನಗಳು ತಿರುಮಕೂಡಲು ನರಸೀಪುರ ತಾಲೂಕಿನಲ್ಲಿ ಲಭ್ಯವಾಗಿವೆ. ಸಂಗಮ ವಂಶದ ಆಳ್ವಿಕೆಯು ಒಂದನೇ ಬುಕ್ಕರಾಯನೊಂದಿಗೆ ಆರಂಭಗೊಂಡಿತು. ಇವರ ಕಾಲದ್ದೆಂದು ಊಹಿಸಲಾಗಿರುವ ಹಿರಿಯೂರಿನ ವೀರಗಲ್ಲು ಶಾಸನದ ತೇದಿಯು ತಪ್ಪಾಗಿ ಉಲ್ಲೇಖಿತಗೊಂಡಿದ್ದು, ಅದರ ಕಾಲ ೧೩೫೪ ಎಂದು ತರ್ಕಿಸಲಾಗಿದೆ. ಊರ ರಕ್ಷಣೆಗೆ ಕಳ್ಳರ ವಿರುದ್ಧ ಹೋರಾಡುತ್ತಾ ಮಡಿದ ರಾಮೋಜನಿಗಾಗಿ ಮಾದೋಜನು ನಿಲ್ಲಿಸಿದ ೧೩೬೭ರ ಶಾಸನ ಬಹಳ ಹಾಳಾಗಿದ್ದು, ಮಹಾಪ್ರಧಾನ ಬಸವದಂಡನಾಯ್ಕ ಹಾಗೂ ಅಧಿಕಾರಿ ರಾಘವದೇವರಸರನ್ನಷ್ಟೇ ಉಲ್ಲೇಖಿಸುತ್ತದೆ. ಇಮ್ಮಡಿ ಹರಿಹರನ ಕಾಲಕ್ಕೆ ಸೇರಿದ ಬೈರಾಪುರದ ೧೩೯೨ರ ಶಾಸನ, ಆಲ್ಗೊಡ ಕೇದಾರನಾಥ ಭಟ್ಟನು ರಾಮಭಕ್ತರಿಗೆ ಭೈರಾಪುರವನ್ನು ೧೧ ಗದ್ಯಾಣದ ವಾರ್ಷಿಕ ಕಟ್ಟುಗುತ್ತಿಗೆ ಕರಾರಿನ ಮೇಲೆ ಅನುಭವಿಸಲು ಅನುಮತಿ ನೀಡಿದ ಅಂಶವನ್ನು ಒಳಗೊಂಡಿದೆ. ತಿ.ನರಸೀಪುರದ ೧೩೯೭ರ ತಾಮ್ರಶಾಸನ, ಚನ್ನಪಟ್ಟಣದ ಬಳಿಯ ಕೊಳತೂರು ಗ್ರಾಮವನ್ನು ಹರಿಹರಪುರ ಅಗ್ರಹಾರವನ್ನಾಗಿ ಮಾಡಿ ೩೬ ವೃತ್ತಿಗಳನ್ನಾಗಿ ವಿಭಜಿಸಿ ಬ್ರಾಹ್ಮಣರಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸುತ್ತದೆ. ಇದೇ ತೇದಿಯಲ್ಲಿ ನೀಡಲ್ಪಟ್ಟಿರುವ ಹೆಮ್ಮಿಗೆಯ ತಾಮ್ರಶಾಸನದಿಂದ ಹೆಮ್ಮಗಿ ಗ್ರಾಮಕ್ಕೆ ಹರಿಹರ ರಾಜೇಂದ್ರಪುರ



ಎಂಬ ಅಭಿದಾನವನ್ನು ನೀಡಿ ಹಿರಿಯ ಮಾಧವಪುರದ ವರದಭಟ್ಟನಿಗೆ ದತ್ತಿ ಬಿಟ್ಟಿದ್ದ ಅಂಶ ವೇದ್ಯವಾಗುತ್ತದೆ.

ಒಂದನೆಯ ದೇವರಾಯನ ಆಳ್ವಿಕೆಗೆ ಸೇರಿದ ೧೪೨೦ರ ಚಿದರಳ್ಳಿ ಶಾಸನ, ತಲಕಾಡು ನಾಡಿನ ೪೨ ಪುರಗಳಲ್ಲಿ ಮುಖ್ಯವಾದ ಮಲ್ಲಿನಾಥಪುರ, ಸಿಂದೆಯಪುರ, ರಾಮಗೊಂಡನಪುರ, ಚಿದರವಳ್ಳಿಪುರ ಮುಂತಾದ ಪುರಗಳ ಸಮಸ್ತ ಪುರಬೋವಗಳು ಚಿದುರಹಳ್ಳಿಯ ಸೋಮೇಶ್ವರ ದೇವರ ಸ್ಥಾನಿಕರಿಗೆ ಉಂಬಳಿ ನೀಡಿದ ಅಂಶವನ್ನು ದಾಖಲಿಸಿದೆ. ಇಮ್ಮಡಿ ದೇವರಾಯನ ಆಳ್ವಿಕೆಗೆ ಸೇರಿದ ೧೪೨೬ರ ವಿಜಯಪುರ ಶಾಸನದಿಂದ ಕಿರುನಗರದ (ವಿಜಯಪುರ) ಅರ್ಕನಾಥ ದೇವರಿಗೆ ಅಧಿಕಾರಿ ಸೋಮರಸನು ಮಗ್ಗದೆರೆಯ ಬಾಬ್ತಿನಿಂದ ಒಂದು ಗದ್ಯಾಣವನ್ನು ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ವಿರೂಪಾಕ್ಷನ ಆಡಳಿತಕ್ಕೆ ಸೇರಿದ ೧೪೮೨ರ ತಡಿಮಾಲಂಗಿ ಶಾಸನ, ಕಲಿವರ್ಷವನ್ನು ಉಲ್ಲೇಖಿಸುತ್ತಾ ಸೋಮಣ್ಣ ನಾಯಕರು ತಾಯಿ ಸಾಯಮ್ಮನವರಿಗೆ ಕೊಟ್ಟಿದ್ದ ಉಂಬಳಿಯನ್ನು ಶ್ರೀರಂಗಪುರವಾದ ಮಾಲಂಗಿಯ ಜನಾರ್ದನದೇವರ ಸೇವೆಗೆಂದು ದತ್ತಿಬಿಟ್ಟ ಅಂಶವನ್ನು ಅರಹುತ್ತದೆ.

ಸಂಗಮರ ನಂತರ ಅಧಿಕಾರಕ್ಕೆ ಬಂದ ಸಾಳುವ ವಂಶದ ಇಮ್ಮಡಿ ನರಸಿಂಹನ ಆಳ್ವಿಕೆಗೆ ಸೇರಿದ ೧೪೯೭ರ ಸೋಮನಾಥಪುರ ಶಾಸನ, ಶಿಥಿಲಗೊಂಡಿದ್ದ ಸೋಮನಾಥಪುರ ಅಗ್ರಹಾರವನ್ನು ಅರಸನ ಆದೇಶದಂತೆ ಜೀರ್ಣೋದ್ಧಾರ ಮಾಡಿ, ಹಲವು ಬ್ರಾಹ್ಮಣರಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಸಾಳುವರನ್ನು ಬದಿಗೊತ್ತಿ ವಿಜಯನಗರದಲ್ಲಿ ಅಧಿಕಾರ ಗದ್ದುಗೆಯನ್ನೇರಿದ, ತುಳುವರಲ್ಲೇ ಪ್ರಖ್ಯಾತನಾದ ಕೃಷ್ಣದೇವರಾಯ(೧೫೦೯–೧೫೨೯)ನು ದಕ್ಷಿಣದಲ್ಲಿದ್ದ ಉಮ್ಮತ್ತೂರು ಪಾಳೇಗಾರರನ್ನು ಸೋಲಿಸಿ, ಸಾಳುವ ಗೋವಿಂದರಾಜನನ್ನು ಆ ಪ್ರಾಂತದ ರಾಜ್ಯಪಾಲನನ್ನಾಗಿ ನೇಮಿಸಿದನು. ಇವನ ಆಳ್ವಿಕೆಗೆ ಸೇರಿದ ೧೫೧೪ರ ತಡಿಮಾಲಂಗಿಯ ಶಾಸನದಿಂದ ವಿಶ್ವಮೂರ್ತಿ ಗುರುರಾಯರು ಕಾಶಿಯಿಂದ ವಿಶ್ವೇಶ್ವರಲಿಂಗವನ್ನು ತಂದಿಲ್ಲಿ ಪ್ರತಿಷ್ಠಾಪಿಸಿ ಅದರ ಪೂಜಾವಿಧಿಗೆಂದು ನೆರೆಹೊರೆಯ ಗ್ರಾಮಗಳಲ್ಲಿ ಭೂಮಿಯನ್ನು ದಾನ ನೀಡಿದ ಅಂಶ ಗೊತ್ತಾಗುತ್ತದೆ. ಇದೇ ಅರಸನ ೧೫೧೬ರ ಮಾದಾಪುರ ಶಾಸನ, ಮಹಾಪ್ರಧಾನ ಸಾಳುವ ಗೋವಿಂದರಾಜನು, ಮಾದಾಪುರ ಗ್ರಾಮವನ್ನು ಉಮ್ಮತ್ತೂರ ನಂಜಯ್ಯ ಅರಸರಿಗೆ ವಿರೂಪಾಕ್ಷ ಸನ್ನಿಧಿಯಲ್ಲಿ ದತ್ತಿ ನೀಡಿದ ಅಂಶವನ್ನು ದಾಖಲಿಸುತ್ತದೆ. ಹೊಸಪುರದ ಇನ್ನೊಂದು ಶಾಸನದಿಂದ ಇದೇ ಗೋವಿಂದರಾಜನು ಅಗಸ್ತ್ಯೇಶ್ವರ ದೇವರ ಸೇವೆಗೆಂದು ಹೊಸಪುರ ಗ್ರಾಮವನ್ನು ದತ್ತಿ ನೀಡಿದ ಅಂಶ ಗೊತ್ತಾಗುತ್ತಿದ್ದು, ೧೫೨೧ರ ಕಲಿಯೂರು ಶಾಸನದಿಂದ, ಗೋವಿಂದರಾಜನು ಮುಳ್ಳೂರು ಸ್ಥಳದ ಕಲಿಯೂರು ಗ್ರಾಮಕ್ಕೆ ಕೃಷ್ಣರಾಜಪುರ ಎಂದು ಮರುನಾಮಕರಣ ಮಾಡಿ ವಿವಿಧ ಗೋತ್ರದ ಬ್ರಾಹ್ಮಣರಿಗೆ ಬ್ರಹ್ಮದೇಯವಾಗಿ ದಾನ ನೀಡಿದ ಅಂಶ ಗೊತ್ತಾಗುತ್ತದೆ. ಇದೇ ತೇದಿಯ ಸೋಸಲೆಯ ಎರಡು ತಾಮ್ರ ಶಾಸನಗಳು ವ್ಯಾಸತೀರ್ಥರ ಮಠಕ್ಕೆಂದು

ದಾನ ನೀಡಿದ ಅಂಶವನ್ನು ದಾಖಲಿಸುತ್ತವೆ. ಹೆಮ್ಮಿಗೆಯ ೧೫೨೬ರ ಶಾಸನದಿಂದ ಹಿರಿಯ ಮಾದಾಪುರದ ಲಕ್ಷ್ಮೀನಾಥಭಟ್ಟರಿಗೆ ತಾಯೂರು ಸ್ಥಳದಲ್ಲಿದ್ದ ಹೆಮ್ಮಗೆ ಗ್ರಾಮವನ್ನು ದಾನ ಬಿಟ್ಟ ಅಂಶವು ಗೊತ್ತಾಗುತ್ತದೆ. ತೊಟ್ಟವಾಡಿಯ ೧೫೨೭ರ ಶಾಸನದಿಂದ, ಉಮ್ಮತ್ತೂರಿನ ಹೊನ್ನಕಳಸ ದೇವರಿಗೆ ತೊಟ್ಟವಾಡಿ ಗ್ರಾಮವನ್ನು ದತ್ತಿ ಬಿಟ್ಟ ಅಂಶ ವೇದ್ಯವಾಗುತ್ತದೆ. ಮರಡೀಪುರದ ೧೫೨೮ರ ಶಾಸನ, ಸಾಳುವ ಗೋವಿಂದರಾಜ ಒಡೆಯನು ಮೊರಡಿಪುರ ಅಗ್ರಹಾರವನ್ನು ವೈದಿಕ ಗುರುಗಳಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಇದೇ ಸಾಮ್ರಾಟನಿಗೆ ಸೇರಿದ ತಿ.ನರಸೀಪುರ ಶಾಸನ, ನಾರಸಿಂಹ ದೇವರಿಗೆ ನೀಡಿದ ದಾನವನ್ನು ದಾಖಲಿಸಿದರೆ, ಇನ್ನೊಂದು ಶಾಸನ, ಶರಣಪ್ಪ ಶೆಟ್ಟಿಯು ನಿರ್ಮಿಸಿದ ಪಾರ್ವತಿ ದೇವಾಲಯ, ದೇವಿಯ ಸೇವೆಗೆಂದು ಗೋವಿಂದರಾಜ ಒಡೆಯರು ವಿವಿಧ ಗ್ರಾಮಗಳಲ್ಲಿ ಭೂದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಇವುಗಳಿಂದ ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಈ ಭಾಗವು ಪ್ರಾಧಾನ್ಯತೆ ಪಡೆದಿದ್ದು, ಸಾಳುವ ಗೋವಿಂದರಾಜನೇ ಸುದೀರ್ಘ ಕಾಲ ಈ ಪ್ರಾಂತದ ರಾಜ್ಯಪಾಲನಾಗಿದ್ದ ಅಂಶ ವೇದ್ಯವಾಗುತ್ತದೆ.

ಕೃಷ್ಣದೇವರಾಯನ ಮರಣಾನಂತರ ಅಧಿಕಾರಕ್ಕೆ ಬಂದ ಅವನ ಸೋದರ ಅಚ್ಯುತರಾಯ(೧೫೨೯–೪೨)ನ ಕಾಲಕ್ಕೆ ಸೇರಿದ ಮೂಗೂರಿನ ಒಂದು ಶಾಸನ, ದೇಶಿನಾಥ ದೇವರಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸಿದರೆ, ೧೫೩೪ರ ಇನ್ನೊಂದು ಶಾಸನ, ಅದೇ ದೇವರಿಗೆ ಸ್ಥಳೀಯ ಅಧಿಕಾರಿ ಶಂಕಣ್ಣನ ಅನುಮತದೊಂದಿಗೆ ದೇವಣ್ಣನು ದತ್ತಿಬಿಟ್ಟಿದ್ದನ್ನು ದಾಖಲಿಸುತ್ತದೆ. ಇದೇ ತೇದಿಯ ಭೈರಾಪುರ ಶಾಸನ, ಲಿಂಗಣ್ಣನ ವೀರಗಲ್ಲು ಶಾಸನವಾಗಿವೆ. ಬನ್ನೂರಿನ ೧೫೪೧ರ ಶಾಸನದಿಂದ ಮಹಾಪ್ರಧಾನ ವರದಪ್ಪನಾಯಕನ ಆದೇಶದಂತೆ ತಮ್ಮಣ್ಣನಾಯಕನು, ಬನ್ನೂರಿನ ಹನುಮಂತೇಶ್ವರ ದೇವರಿಗೆ ದಿವ್ಯರಥ, ಉಮಾಸ್ಕಂದ–ವಿಘ್ನೇಶ್ವರ ದೇವತಾಮೂರ್ತಿಗಳನ್ನು ಮಾಡಿಸಿ, ರಥೋತ್ಸವದ ಆಚರಣೆಗೆಂದು ಭೂದಾನ ನೀಡಿದ ಅಂಶ ಗೊತ್ತಾಗುತ್ತದೆ. ಅಚ್ಯುತರಾಯನ ನಂತರ ಅಧಿಕಾರಕ್ಕೆ ಬಂದ ಸದಾಶಿವರಾಯ (೧೫೪೩–೭೦)ನು ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಗೊಂಬೆಯಾಗಿದ್ದು, ಸಾಮ್ರಾಜ್ಯವು ಆರಂಭದಲ್ಲಿ ಏಳ್ಗೆಯನ್ನು ಕಂಡರೂ ಅಂತಿಮವಾಗಿ ೧೫೬೫ರ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ಹೀನಾಯ ಸೋಲನ್ನುಣಬೇಕಾಯಿತು. ಇವನ ಆಳ್ವಿಕೆಗೆ ಸೇರಿದ ಸೋಮನಾಥಪುರದ ೧೫೫೦ರ ಶಾಸನವು ಅರವೀಡು ವಂಶದ ಅಹೋಬಲರಾಜ ಮಹಾಅರಸನು ಸೋಮನಾಥಪುರದ ಪ್ರಸನ್ನಕೇಶವ ಗುಡಿಯ ಈಶಾನ್ಯ ಭಾಗದಲ್ಲಿದ್ದ ಪಂಚಲಿಂಗದೇವರ್ಗೆ ದಾನ ಬಿಟ್ಟ ಅಂಶವನ್ನು ದಾಖಲಿಸುತ್ತಾ, ಸೋಮನಾಥಪುರವು ವಶಿಷ್ಠಾಶ್ರಮವಿದ್ದ ಪುಣ್ಯಕ್ಷೇತ್ರ ಆಗಿತ್ತೆಂದೂ ಉಲ್ಲೇಖಿಸುತ್ತದೆ. ತಿ.ನರಸೀಪುರದ ೧೫೫೬ ಶಾಸನದಿಂದ ರಾಯಸದ ವೆಂಕಟಾದ್ರಿಯು ತಿರುಮಕೂಡಲಿನ ಅಗಸ್ತ್ಯೇಶ್ವರ ದೇವರ ಪೂಜೆ ರಥೋತ್ಸವಗಳಿಗೆ, ಹನುಮಂತೇಶ್ವರ ಹಾಗೂ ಆದಿಗುಂಜಿಯ ನರಸಿಂಹದೇವರ ತಿರುವಿಡಿಯಾಟಕ್ಕೆಂದು ಶ್ರೀರಂಗಪಟ್ಟಣದ ಸ್ಥಳಕ್ಕೆ ಸೇರಿದ ಗ್ರಾಮವೊಂದನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ.



ಆದರೆ ಇದೇ ತೇದಿಯ ತುಂಬಲದ ಇನ್ನೊಂದು ಶಾಸನದಿಂದ ದಾನ ನೀಡಿದ ಆ ಗ್ರಾಮವು ತುಂಬಲ ಎಂಬ ಅಂಶ ಸ್ಪಷ್ಟವಾಗುತ್ತದೆ.

ವಿಜಯನಗರ ಸಾಮ್ರಾಜ್ಯದ ಪತನಾನಂತರ (೧೫೬೫) ರಾಜಧಾನಿ ವಿಜಯನಗರವು ಅಂತಃಕಲಹ, ದರೋಡೆ, ಬಾಹ್ಯ ಲೂಟಿಗಳಿಗೆ ಬಲಿಯಾಯಿತು. ಪೆನುಗೊಂಡೆಯು ವಿಜಯನಗರದರಸರ ರಾಜಧಾನಿಯಾಯಿತು. ಅನಂತರ ೧೫೭೦ರಲ್ಲಿ ಅಧಿಕಾರ ಗದ್ದುಗೆ ಏರಿದ ಅರವೀಡುಗಳ (೧೫೭೦–೧೬೪೬) ಆಡಳಿತಾವಧಿಯಲ್ಲಿ ತಿರುಮಲ (೧೫೭೦–೭೨) ಒಂದನೆಯ ಶ್ರೀರಂಗ ೧೫೭೨–೮೬) ಇಮ್ಮಡಿ ವೆಂಕಟ (೧೫೮೬–೧೬೧೪) ಇಮ್ಮಡಿ ಶ್ರೀರಂಗ (೧೬೧೪) ರಾಮದೇವ (೧೬೧೭–೩೨) ಮುಮ್ಮಡಿ ವೆಂಕಟಾದ್ರಿ (೧೬೩೨–೪೨) ಹಾಗೂ ನಾಲ್ವಡಿ ಶ್ರೀರಂಗ(೧೬೪೨–೪೬)ರ ಕಾಲಕ್ಕೆ ಸೇರಿದ ಶಾಸನಗಳು ತಾಲೂಕಿನಲ್ಲಿ ವಿರಳವೆಂದೇ ಹೇಳಬೇಕು. ಆದರೂ ತಾಲೂಕಿನ ೧೫೬೮ರ ಮುಡಕನಪುರ ಶಾಸನದಲ್ಲಿ ಜಗದೇವರಾಯ ಒಡೆಯನ ಮಗ ದೇವರಾಯ ಒಡೆಯನು ಆ ಗ್ರಾಮವನ್ನು ಪಲ್ಲಕ್ಕಿ ಉಂಬಳಿಯಾಗಿ ದಾನ ನೀಡುವ ಸಂದರ್ಭದಲ್ಲಿ ಇಮ್ಮಡಿ ವೆಂಕಟಾದ್ರಿಯ ಉಲ್ಲೇಖವಿದೆ. ಇದೇ ರೀತಿ ನರಸೀಪುರದ ೧೬೨೫ರ ತಾಮ್ರಶಾಸನದಲ್ಲಿ ಮೈಸೂರು ಅರಸ ಐದನೆಯ ಚಾಮರಾಜನು ಇಮ್ಮಡಿ ವೆಂಕಟಾದ್ರಿಯ ಮರಣದ ನಂತರವೂ ಅವನನ್ನು ಗೌರವಾರ್ಥವಾಗಿ ಸ್ಮರಿಸುತ್ತಾ ತನ್ನ ಹೆಸರಲ್ಲಿ ಚಾಮರಾಜಸಮುದ್ರ ಎಂಬ ಅಗ್ರಹಾರ ನಿರ್ಮಿಸಿ ದಾನ ಬಿಟ್ಟಿರುವುದು ಉಲ್ಲೇಖಾರ್ಹ. ನಾಲ್ವಡಿ ಶ್ರೀರಂಗರಾಯನು ವೇಲುಪುರಿ (ಬೇಲೂರು)ಯಿಂದ ಆಳುತ್ತಿದ್ದಾಗ ಶ್ರೀಪಾದಸ್ವಾಮಿಗಳ ಮಠದ ಗೋಪಾಲಕೃಷ್ಣಸ್ವಾಮಿಯ ಸೇವೆಗೆಂದು ಗ್ರಾಮಗಳನ್ನು ದತ್ತಿ ಬಿಟ್ಟ ಅಂಶವನ್ನು ಸೋಸಲೆ ಮಠದಲ್ಲಿರುವ ೧೬೬೨ ಹಾಗೂ ೧೬೬೪ರ ತಾಮ್ರ ಶಾಸನಗಳು ದಾಖಲಿಸಿವೆ. ವಿಜಯನಗರ ಸಾಮ್ರಾಜ್ಯವು ಅಶಕ್ತಗೊಳ್ಳುತ್ತಿದ್ದಂತೆ ಶ್ರೀರಂಗಪಟ್ಟಣ, ಉಮ್ಮತ್ತೂರು ಪರಿಸರದಲ್ಲಿ ಸ್ಥಳೀಯ ಶಕ್ತಿಗಳು ಪ್ರಬಲಗೊಂಡ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಅದರಂತೆ ನರಸೀಪುರ ತಾಲೂಕು ಪ್ರದೇಶವು ಹದಿನಾಡು ಹಾಗೂ ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟಿತು.

**ಹದಿನಾಡು ಅರಸರು :** ವಿಜಯನಗರದ ಸಾಮಂತರಾಗಿದ್ದ ಇವರು ಯಳಂದೂರನ್ನು ರಾಜಧಾನಿಯನ್ನಾಗಿಸಿಕೊಂಡು ಯಳಂದೂರು ಹಾಗೂ ನರಸೀಪುರ ತಾಲೂಕು ಪ್ರದೇಶಗಳ ಮೇಲೆ ಭಾಗಶಃ ನಿಯಂತ್ರಣ ಹೊಂದಿದ್ದರು. ಈ ಮನೆತನಕ್ಕೆ ಸೇರಿದ ದೀಪರಾಜ (ದೇವರಸ), ರಾಮರಾಜ (೧೫೫೦–೫೬) ತಿರುಮಲ (೧೬೨೮) ಹಾಗೂ ಮುದ್ದುರಾಜ (೧೬೬೭)ರ ಕಾಲದ ಸುಮಾರು ೧೨ ಶಾಸನಗಳು ಮೈಸೂರು ಜಿಲ್ಲೆಯಲ್ಲಿ ಲಭಿಸಿವೆ. ಅವುಗಳಲ್ಲಿ ಮೂಗೂರಿನ ೧೬೨೮ರ ಶಾಸನ ರಾಮರಾಜನ ಸೋದರನ ಮಗನಾದ, ತಿರುಮಲನಾಯಕನಿಂದ ಭೂದಾನ ಪಡೆದ ಚಿಕ್ಕೊಡೆಯನು ದೇಶಿನಾಥ ದೇವರಿಗೆ ಅದನ್ನು ಮರುದಾನ ಮಾಡಿದ್ದನ್ನು ದಾಖಲಿಸಿದೆ.

**ಮೈಸೂರು ಅರಸರು :** ಯದುಕುಲದವರೆಂದೂ, ದ್ವಾರಾವತಿಪುರವರಾಧೀಶ್ವರರೆಂದೂ ತಮ್ಮನ್ನು ಕರೆದುಕೊಳ್ಳುವ ಒಡೆಯರ್ ರಾಜಮನೆತನ, ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೧೩೯೯ರಿಂದ (೧೬೧೦–೧೭೯೯ರವರೆಗೆ ಶ್ರೀರಂಗಪಟ್ಟಣ) ೧೯೪೭ರವರೆಗೆ ರಾಜ್ಯಭಾರ ನಡೆಸಿತಾದರೂ ಆರಂಭದ ಅರಸರಾದ ವಿಜಯ (೧೩೯೯-೧೪೨೩), ಒಂದನೆಯ ಚಾಮರಾಜ (೧೪೨೩–೫೯), ಒಂದನೆಯ ತಿಮ್ಮರಾಜ (೧೪೫೯–೭೮), ಎರಡನೆಯ ಚಾಮರಾಜ (೧೪೭೮–೧೫೧೩) ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರ (೧೫೧೩–೫೩) ಇಮ್ಮಡಿ ತಿಮ್ಮರಾಜ (೧೫೫೩–೭೨) ಹಾಗೂ ನಾಲ್ವಡಿ ಬೋಳಚಾಮರಾಜ (೧೫೭೨–೭೬) ಕಾಲಕ್ಕೆ ಸೇರಿದ ಶಾಸನಗಳು ತಾಲೂಕಿನಲ್ಲಿ ಲಭ್ಯವಿಲ್ಲ. ಆದರೆ ಮೈಸೂರು ಅರಸರ ವಂಶಾವಳಿಯಲ್ಲಿ ಈ ಹೆಸರುಗಳು ಲಭಿಸುತ್ತವೆ. ಇದಕ್ಕೆ ಕಾರಣ ಅವರ ಆಡಳಿತವು ತೆರಕಣಾಂಬಿಯ ಆಸುಪಾಸಿನ ಪ್ರದೇಶಕ್ಕೆ ಸೀಮಿತವಾಗಿದ್ದಂತೆ ತೋರುತ್ತದೆಂದು ಸಿ.ಹಯವದನರಾವ್ ಅಭಿಪ್ರಾಯ ಪಡುತ್ತಾರೆ. ಈ ಅವಧಿಯಲ್ಲಿ ಕಳಲೆ, ಮೂಗೂರು, ಉಮ್ಮತ್ತೂರು, ತಗಡೂರು ಹಾಗೂ ಹುರಗಳಲ್ಲೂ ಸ್ಥಳೀಯ ಪಾಳೇಗಾರರು ಆಳುತ್ತಿದ್ದರು. ಮೈಸೂರು ಅರಸ ನಾಲ್ಕನೇ ಬೋಳಚಾಮರಾಜನು (೧೫೭೨–೭೬) ಕಾರುಗಹಳ್ಳಿ, ತಲಕಾಡು, ಕನ್ನಂಬಾಡಿ ಮುಂತಾದ ಪಾಳೇಗಾರರನ್ನು ಸೋಲಿಸಿದ್ದನಲ್ಲದೇ ವೆಂಕಟಾದ್ರಿಯ ಸೇನೆಯನ್ನು ಎದುರಿಸಿದನೆಂದು ಹೇಳಲಾಗುತ್ತದೆ. ಮುಂದೆ ಬೆಟ್ಟದ ದೇವರಾಜ (೧೫೭೬–೭೮)ನ ನಂತರ ಅಧಿಕಾರಕ್ಕೆ ಬಂದ ಒಂದನೆಯ ರಾಜಒಡೆಯ (೧೫೭೮–೧೬೧೭)ನು ಮೈಸೂರು ಅರಸರ ಆಳ್ವಿಕೆಗೆ ಭದ್ರ ಬುನಾದಿ ಹಾಕಿದನು. ಇವನು ರಂಗಸಮುದ್ರ ಹಾಗೂ ಸುತ್ತಮುತ್ತಲಿನ ೧೭ ಹಳ್ಳಿಗಳನ್ನು ೧೫೮೬ರಲ್ಲೂ, ಮುಳ್ಳೂರನ್ನು ೧೫೯೧ರಲ್ಲೂ, ಕಾರುಗಹಳ್ಳಿ ಕೋಟೆಯನ್ನು ೧೫೯೫ರಲ್ಲೂ ವಶಪಡಿಸಿಕೊಳ್ಳುವ ಮೂಲಕ ಶ್ರೀರಂಗಪಟ್ಟಣದ ಪ್ರಾಂತಾಧಿಕಾರಿಯಾಗಿದ್ದ ತಿರುಮಲನ ವಿರೋಧಿಯಾದನು. ಮಿಗಿಲಾಗಿ ರಾಜಒಡೆಯನು ಸೋಸಲೆ (೧೬೦೬), ಬನ್ನೂರು (೧೬೦೭) ಮುಂತಾದವನ್ನು ಗೆದ್ದು ೧೬೧೦ರ ವೇಳೆಗೆ ಪ್ರಬಲಗೊಂಡು ಶ್ರೀರಂಗಪಟ್ಟಣದ ಗದ್ದುಗೆಗಾಗಿ ತಿರುಮಲನೊಂದಿಗೆ ಕದನಕ್ಕಿಳಿದು, ಅವನನ್ನು ಹೊರದಬ್ಬುವ ಮೂಲಕ ವಿಜಯನಗರದ ಅರಸ ಇಮ್ಮಡಿ ವೆಂಕಟಾದ್ರಿಯ ವಿಶ್ವಾಸಕ್ಕೂ ಪಾತ್ರನಾದನು. ಈ ಅಂಶವನ್ನು ನರಸೀಪುರದ ೧೬೨೨ರ ಶಾಸನದಲ್ಲಿ ಬರುವ ರಾಜ ಒಡೆಯರಿಗೆ ಉಮ್ಮತ್ತೂರು–ಶ್ರೀರಂಗಪಟ್ಟಣಗಳನ್ನು ವೆಂಕಟಪತಿರಾಯರು ಕಾಣಾಚಿಯಾಗಿ (ಉಂಬಳಿ) ನೀಡಿದ ಉಲ್ಲೇಖವು ಪುಷ್ಟೀಕರಿಸುತ್ತದೆ. ರಾಜಒಡೆಯನ ಕೈಯಲ್ಲಿ ಸೋತ ತಿರುಮಲನು ಮಡಿದು, ಮಾಲಂಗಿಗೆ ತೆರಳಿದ್ದ ಅವನ ಮಡದಿ ಅಲಮೇಲಮ್ಮನನ್ನು ಒಡವೆಗಳಿಗಾಗಿ ರಾಜ ಒಡೆಯನು ಪೀಡಿಸಿ ದುಂಬಾಲು ಬಿದ್ದಾಗ, ಅದನ್ನು ನೀಡದೆ, 'ತಲಕಾಡು ಮರಳಾಗಿ ಮಾಲಂಗಿ ಮಡುವಾಗಿ ಮೈಸೂರು ಅರಸರಿಗೆ ಮಕ್ಕಳಾಗದಿರಲಿ' ಎಂದು ಶಪಿಸಿ ಕಾವೇರಿ ಮಡುವಿಗೆ ಧುಮಿಕಿ, ಸತ್ತಳೆಂದು ಹೇಳಲಾಗುತ್ತದೆ. ಅವಳ ಶಾಪದಂತೆ ಮೈಸೂರು ಅರಸರಲ್ಲಿ ದತ್ತಕ ಅರಸರಿಗೆ ಮಾತ್ರ ಮಕ್ಕಳಾಗುತ್ತದೆಂಬ ಅಂಶವು ಈಗಲೂ ಉಳಿದುಕೊಂಡು ಬಂದಿದೆ. ಹೀಗೆ ಶ್ರೀರಂಗಪಟ್ಟಣದಿಂದಾಳಲಾರಂಭಿಸಿದ ರಾಜಒಡೆಯನು ತೆರಕಣಾಂಬಿ, ಉಮ್ಮತ್ತೂರುಗಳನ್ನು



ವಶಪಡಿಸಿಕೊಂಡುದಲ್ಲದೆ ತಲಕಾಡು, ಮೂಗೂರು, ಕಳಲೆ ಹುಲ್ಲಹಳ್ಳಿ ಮುಂತಾದ ಪಾಳೇಗಾರರಿಗೂ ಕಪ್ಪ ವಿಧಿಸಿದನೆಂದು ಹೇಳಲಾಗುತ್ತದೆ. ಅಲ್ಲದೆ ವಿಜಯನಗರದಲ್ಲಿ ನಡೆಯುತ್ತಿದ್ದ ದಸರೆಯ ಮಾದರಿಯಲ್ಲೇ ಶ್ರೀರಂಗಪಟ್ಟಣದಲ್ಲೂ ಈತನೇ ದಸರಾ ಉತ್ಸವವನ್ನು ಆರಂಭಿಸಿದನು.

ಇವನ ನಂತರ ಅಧಿಕಾರಕ್ಕೆ ಬಂದ ಐದನೆಯ ಚಾಮರಾಜನ ಆಳ್ವಿಕೆಗೆ (೧೬೧೮–೧೬೩೭) ಸೇರಿದ ೧೬೨೨ರ ತಿ.ನರಸೀಪುರ ತಾಮ್ರಶಾಸನದಿಂದ ಐದನೆಯ ಚಾಮರಾಜನು ಉಮ್ಮತ್ತೂರು ಚಾವಡಿಗೆ ಸೇರಿದ ಮೂಗೂರು ಸ್ಥಳದ ತಾಯೂರು ನಾಡಲ್ಲಿನ ನವಿಲೂರು–ಆಲದೂರು ಗ್ರಾಮಗಳನ್ನು ಒಗ್ಗೂಡಿಸಿ ಚಾಮರಾಜಸಮುದ್ರ ಎಂದು ಹೆಸರಿಟ್ಟು ಅದನ್ನು ೪೧ ವೃತ್ತಿಗಳನ್ನಾಗಿ ವಿಭಜಿಸಿ, ಗುಂಜಾನರಸಿಂಹಸ್ವಾಮಿಯ ಸೇವೆಯೂ ಸೇರಿದಂತೆ ೩೩ ಬ್ರಾಹ್ಮಣರಿಗೆ ದಾನ ಬಿಟ್ಟ ಅಂಶವು ವೇದ್ಯವಾಗುತ್ತದೆ.

ಇಮ್ಮಡಿ ರಾಜ ಒಡೆಯ (೧೬೩೭–೩೮)ನ ನಂತರ ಗದ್ದುಗೆ ಏರಿದ ಒಂದನೆಯ ಕಂಠೀರವನರಸರಾಜ (೧೬೩೮–೫೯)ನ ಆಳ್ವಿಕೆಯಲ್ಲಿ ಬಿಜಾಪುರದ ಧಾಳಿಯ ಬಿಸಿ ಸಂಸ್ಥಾನಕ್ಕೂ (೧೬೩೮) ತಟ್ಟಿತ್ತು. ರಣದುಲ್ಲಾಖಾನ್ ಹಾಗೂ ಷಹಾಜಿ ದಂಡನಾಯಕತ್ವದಲ್ಲಿ ಬಿಜಾಪುರದ ಸೇನೆಯು ಬೆಂಗಳೂರುವರೆಗೂ ಮುನ್ನಡೆ ಸಾಧಿಸಿತು. ಯಲಹಂಕ ನಾಡಪ್ರಭು ಕೆಂಪೇಗೌಡ ಬೆಂಗಳೂರು ತ್ಯಜಿಸಿ ಮಾಗಡಿಗೆ ತೆರಳಿದರೆ, ಷಹಾಜಿಗೆ ಬೆಂಗಳೂರನ್ನು ಜಹಾಗೀರಾಗಿ ನೀಡಲಾಯಿತು. ಏತನ್ಮಧ್ಯೆ ಕಪ್ಪ ನೀಡುವ ಮೂಲಕ ಬಿಜಾಪುರದೊಂದಿಗೆ ಕಂಠೀರವ ನರಸರಾಜನು ಸಂಧಾನ ಮಾಡಿಕೊಂಡನು.

ಇವನ ನಂತರ ದೊಡ್ಡದೇವರಾಯ (೧೬೫೯–೭೨) ನು ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಗೆ ಸೇರಿದ ತಲಕಾಡಿನ ೧೬೬೩ರ ತಾಮ್ರಶಾಸನ, ನಾಗಮಂಗಲ ಸ್ಥಳದ ಹಳ್ಳಿಕೇರಿಯನ್ನು ಅಗ್ರಹಾರವನ್ನಾಗಿಸಿ ದಾನ ಬಿಟ್ಟ ಅಂಶವನ್ನು ತಿಳಿಸಿದರೆ, ೧೬೭೩ರ ಬೆಟ್ಟಳ್ಳಿ (ಮುಡುಕುತೊರೆ) ಶಾಸನ, ಬೆಟ್ಟಹಳ್ಳಿಯ ಮಲ್ಲಿಕಾರ್ಜುನ ದೇವರಿಗೆ ದೇವರಾಜಪುರ ನಾಮಾಂಕಿತ ಬೆಟ್ಟಹಳ್ಳಿ ಗ್ರಾಮವನ್ನು ದಾನಬಿಟ್ಟಿದ್ದನ್ನು ದಾಖಲಿಸಿದೆ. ಆನಂತರ ಅವನ ದಾಯಾದಿಯಾದ ಚಿಕ್ಕದೇವರಾಜ ಒಡೆಯನು (೧೬೭೨–೧೭೦೪) ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯು ಮೊಘಲ್–ಮರಾಠ ಧಾಳಿಗಳನ್ನು ಕಂಡಿತು. ಇವನು ಔರಂಗಜೇಬನಿಗೆ ಕಪ್ಪವಾಗಿ ಮೂರು ಲಕ್ಷ ವರಾಹ ನೀಡಿ, ಬೆಂಗಳೂರು ಜಹಾಗೀರನ್ನು ಪಡೆದನು. ಆಡಳಿತ ಸುಧಾರಣೆ ತರಲು ಅಠಾರ ಕಚೇರಿಯನ್ನು ಆರಂಭಿಸಿ ಅಂಚೆ ವ್ಯವಸ್ಥೆಗೆ ನಾಂದಿ ಹಾಡಿದನು. ಉಕ್ಕಲಗೆರೆಯ ೧೬೭೬ರ ಶಾಸನ ಸೋಮನಾಥಪುರದಲ್ಲಿ ಕಂಠೀರವನರಸರಾಜನು ನಿರ್ಮಿಸಿದ ಪಟ್ಟಾಭಿರಾಮ ದೇವರಿಗೆ ಉಕ್ಕಲಗೆರೆ ಗ್ರಾಮವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಏತನ್ಮಧ್ಯೆ, ತಲಕಾಡಿನ ೧೬೭೬ರ ಶಾಸನದಿಂದ ಅರಸನ ಕಾರ್ಯಕರ್ತನಾದ ಕೊಟ್ಟೂರಯ್ಯನು ತಲಕಾಡಿನಲ್ಲಿ ಮಲ್ಲೇಶ್ವರನನ್ನು ಪ್ರತಿಷ್ಠಾಪಿಸಿದ್ದನ್ನು ದಾಖಲಿಸಿದೆ. ಇವನ ನಂತರ ಬಂದ ಇಮ್ಮಡಿ ಕಂಠೀರವ ನರಸರಾಜನು (೧೭೦೪–೧೪) ಕಿವುಡನಿದ್ದು, ಔರಂಗಜೇಬನಿಗೆ ಕಪ್ಪ ನೀಡಲು ಒಪ್ಪಿ ಅಧಿಕಾರದಲ್ಲಿ

ಮುಂದುವರಿದನು. ಇವನ ನಂತರ ಬಂದ ಬಾಲಕ ದೊಡ್ಡಕೃಷ್ಣರಾಜ (೧೭೧೪–೩೨)ನ ಕಾಲದಿಂದ ಕಳಲೆ ಮನೆತನದ ದಳವಾಯಿಗಳ ದರ್ಬಾರು ಆಸ್ಥಾನದಲ್ಲಿ ಆರಂಭಗೊಂಡು ಇಮ್ಮಡಿ ಕೃಷ್ಣರಾಜ (೧೭೩೪–೬೬)ನವರೆಗೂ ಮುಂದುವರಿಯಿತು. ಈ ಅವಧಿಗೆ ಸೇರಿದ ನರಸೀಪುರ ಶಾಸನ, ಮೂಗೂರ ಪ್ರಭುಗಳ ರಾಣಿ ಚಾಮಮ್ಮಣಿಯ ಮಂಟಪ ಸೇವೆಯನ್ನು ದಾಖಲಿಸಿದರೆ, ನರಸೀಪುರದ ೧೭೪೯ರ ತಾಮ್ರ ಶಾಸನ ದಳವಾಯಿ ಅಗ್ರಹಾರದ ಸ್ಥಾಪನೆ ಬಗ್ಗೆ ದಾಖಲಿಸುತ್ತದೆ.

**ಹೈದರಾಲಿ** : ದಳವಾಯಿ ನಂಜರಾಜಯ್ಯನ ವಿಶ್ವಾಸಕ್ಕೆ ಪಾತ್ರನಾಗುವ ಮೂಲಕ ಸಂಸ್ಥಾನದಲ್ಲಿ ಸೈನಿಕರಾಗಿ ಸೇವೆಯನ್ನಾರಂಭಿಸಿದ ಹೈದರಾಲಿಯು ದೇವನಹಳ್ಳಿ (೧೭೪೯) ಹಾಗೂ ಜಿಂಜಿಯುದ್ಧ (೧೭೫೧)ಗಳಲ್ಲಿ ಶೌರ್ಯ ಮೆರೆದು ೧೭೫೫ರಲ್ಲಿ ದಿಂಡಿಗಲ್ಲಿನ ಫೌಜುದಾರನಾದನು. ಮುಂದೆ ೧೭೫೮ರಲ್ಲಿ ರಾಜಧಾನಿ ಶ್ರೀರಂಗಪಟ್ಟಣಕ್ಕೆ ಬಂದು ಸೈನಿಕ ಬಂಡಾಯವನ್ನು ನಿಯಂತ್ರಿಸಿ, ದಳವಾಯಿ ನಂಜರಾಜಯ್ಯನನ್ನು ಪದಚ್ಯುತಗೊಳಿಸಿ ತಾನೇ ದಳವಾಯಿಯಾದನು. ಮುಂದೆ ೧೭೬೧ರ ವೇಳೆಗೆ ಮೈಸೂರು ಅರಸರು ಹೆಸರಿಗಷ್ಟೇ ಉಳಿದು, ಹೈದರಾಲಿ ಸರ್ವಾಧಿಕಾರಿಯಾದನು. ಮೈಸೂರು ರಾಜ್ಯವನ್ನು ನಾಲ್ಕು ದಿಕ್ಕಲ್ಲೂ ವಿಸ್ತರಿಸಿದನಾದರೂ, ಅಂತಿಮವಾಗಿ (೧೭೮೨) ಬೆನ್ನುಫಣಿಯಿಂದ ಬಳಲುತ್ತಿದ್ದರೂ ಕದನದಲ್ಲಿ ತೊಡಗಿದ್ದ ಹೈದರ್ ಆರ್ಕಾಡ್ ಬಳಿಯ ನರಸಿಂಗಪೇಟೆಯಲ್ಲಿ ನಿಧನ ಹೊಂದಿದನು.

**ಟಿಪ್ಪುಸುಲ್ತಾನ್ (೧೭೮೨–೯೯)** : ಹೈದರಾಲಿಯ ಮಗನಾದ ಇವನು ಶೌರ್ಯಕ್ಕೆ ಹೆಸರಾಗಿದ್ದು, ಮೈಸೂರಿನ ಹುಲಿ ಎಂದೇ ಪ್ರಖ್ಯಾತನಾಗಿದ್ದನು. ಬ್ರಿಟೀಷರ ವಿರುದ್ಧ ಮೂರನೆಯ ಆಂಗ್ಲೋ–ಮೈಸೂರು ಯುದ್ಧವನ್ನು (೧೭೯೨) ಕೈಗೊಂಡ ಇವನು ಸೋಲು, ಅವಮಾನಗಳನ್ನು ಅನುಭವಿಸಬೇಕಾಯಿತು. ಈ ಯುದ್ಧದಲ್ಲಿ ಮಳವಳ್ಳಿ, ಬನ್ನೂರು, ಅರಕೆರೆ ಮಾರ್ಗವಾಗಿ ಬಂದ ಬ್ರಿಟೀಷ್ ಸೇನೆಯು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿತು. ನಂತರ ಸಂಧಾನದಂತೆ ಅಪಾರ ಕಪ್ಪಕಾಣಿಕೆಯನ್ನು ಪೂರ್ಣವಾಗಿ ನೀಡುವಲ್ಲಿ ಟಿಪ್ಪು ವಿಫಲನಾದಾಗ ಅವನ ಇಬ್ಬರು ಮಕ್ಕಳನ್ನು ಒತ್ತೆಯಾಳುಗಳನ್ನಾಗಿ ಕೊಂಡೊಯ್ಯಲಾಯಿತು. ಇದರಿಂದ ಜರ್ಝರಿತಗೊಂಡ ಟಿಪ್ಪು ತನ್ನೆಲ್ಲ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಬ್ರಿಟೀಷರ ವಿರುದ್ಧ ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ೧೭೯೯ರಲ್ಲಿ ಮುಂದಾದನು. ಆ ಯುದ್ಧದಲ್ಲಿ ಬನ್ನೂರಿಗೆ ಬದಲು ಸೋಸಲೆ ಬಳಿ ಕಾವೇರಿ ನದಿಯನ್ನು ದಾಟಿದ ಬ್ರಿಟೀಷ್ ಸೇನೆಯು ಮರಾಠ ಹಾಗೂ ಹೈದರಾಬಾದ್ ನಿಜಾಮರ ಬೆಂಬಲದೊಂದಿಗೆ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿತು. ಸೋತ ಟಿಪ್ಪು ೧೭೯೯ರಲ್ಲಿ ಹತನಾದನು. ಮೈಸೂರು ಸಂಸ್ಥಾನವು ಶತ್ರುಗಳ ನಡುವೆ ಹಂಚಲ್ಪಟ್ಟರೂ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ಸಂಸ್ಥಾನದ ಗದ್ದುಗೆಯನ್ನು ನೀಡಿ, ಬ್ರಿಟೀಷ್ ರೆಸಿಡೆಂಟರನ್ನು ನೇಮಿಸಲಾಯಿತು. ಕೃಷಿ, ನೀರಾವರಿ, ರೇಷ್ಮೆ, ಕಬ್ಬು, ಸಕ್ಕರೆ ಉದ್ಯಮ ಸೇರಿದಂತೆ ವಿವಿಧ ಕೈಗಾರಿಕೆಗಳಿಗೆ ಟಿಪ್ಪು ಪ್ರೋತ್ಸಾಹ ನೀಡಿದ್ದನು.



**ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೯–೧೮೬೮)** : ಇವರು ಇನ್ನೂ ಬಾಲಕರಾಗಿದ್ದರಿಂದ ದಿವಾನ್ ಪೂರ್ಣಯ್ಯನವರೇ ೧೮೧೧ರವರೆಗೆ ಆಡಳಿತದ ಚುಕ್ಕಾಣಿ ಹಿಡಿದರು. ಸೋಸಲೆಯ ವ್ಯಾಸರಾಜ ಮಠದ ಗೋಪಾಲಕೃಷ್ಣ ದೇವರ ಆರಾಧನೆಗೆಂದು ಚಿನ್ನದ ಮಂಟಪವನ್ನು ಪೂರ್ಣಪ್ರಭು (ದಿವಾನ ಪೂರ್ಣಯ್ಯ)ವು ವಿದ್ಯಾವಲ್ಲಭ ತೀರ್ಥರಿಗೆ ಹರಕೆ ಸಲ್ಲಿಸಿದ ಅಂಶವನ್ನು ಸೋಸಲೆಯ ೧೮೦೯ರ ಶಾಸನ ನಿವೇದಿಸುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಗೆ ಸೇರಿದ ಸೋಸಲೆಯ ಎರಡು ಶಾಸನಗಳು ವ್ಯಾಸರಾಜ ಮಠದ ಗೋಪಾಲಕೃಷ್ಣನಿಗೆ ನೀಡಿದ ದಾನವನ್ನು ಹೇಳಿದರೆ ಮೂಗೂರಿನ ಎರಡು ಶಾಸನಗಳಲ್ಲಿ ಒಂದು ಮುಮ್ಮಡಿಗಳ ಮಗಳು ದೇವರಾಜಮ್ಮಣಿಯು ಗುಡಿಯ ಬಾಗಿಲಿಗೆ ಹಿತ್ತಾಳೆ ಚೌಕಟ್ಟು ಹಾಕಿಸಿದ ಅಂಶವನ್ನು ದಾಖಲಿಸಿದ್ದು, ಇನ್ನೊಂದು ಶಾಸನ ಮೂಗೂರ ಅಮೃತಸಾನಿಯು ದೇವಿಗೆ ಪಲ್ಲಕಿಯನ್ನು ಸಲ್ಲಿಸಿದ್ದನ್ನು ತಿಳಿಸುತ್ತದೆ. ಮುಮ್ಮಡಿ ಕೃಷ್ಣರಾಜರು ೧೮೧೧ರಿಂದ ತಾವೇ ನೇರ ಆಡಳಿತ ಮಾಡಲಾರಂಭಿಸಿದರು. ಆದರೆ ಅರಮನೆಯ ಅಧಿಕ ವೆಚ್ಚ, ಕಂದಾಯ ಸಂಗ್ರಹದಲ್ಲಿ ಕೊರತೆ, ನಗರ್ ರೈತ ಬಂಡಾಯ, ಅಮಲ್ದಾರರ ಬೇಜವಾಬ್ದಾರಿ ಮುಂತಾದ ಅಂಶಗಳು ಸೇರಿ, ರಾಜ್ಯ ಬೊಕ್ಕಸ ಬರಿದಾಗಿ ರಾಜ್ಯವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು. ಆಗ ಬ್ರಿಟೀಷರು ಮುಮ್ಮಡಿಯವರನ್ನು ಪದಚ್ಯುತಿಗೊಳಿಸಿ ಸಂಸ್ಥಾನದ ಆಡಳಿತಕ್ಕೆ ಕಮಿಷನರುಗಳನ್ನು ನೇಮಿಸಿದರು (೧೮೩೧).

**ಕಮಿಷನರುಗಳ ಆಡಳಿತ (೧೮೩೧–೧೮೮೧)** : ಸುಮಾರು ೫೦ ವರ್ಷಕಾಲ ಸಂಸ್ಥಾನವು ಬ್ರಿಟಿಷ್ ಕಮೀಷನರುಗಳಾದ ಲೂಸಿಂಗ್‌ಟೆನ್ (೧೮೩೧) ಬ್ರಿಗ್ಸ್ (೧೮೩೨) ಮೊರಿಸನ್ (೧೮೩೨–೩೪), ಮಾರ್ಕ್ ಕಬ್ಬನ್ (೧೮೩೪–೧೮೬೧), ಸಾಂಡರ್ಸ್ (೧೮೬೧–೬೨), ಬೌರಿಂಗ್ (೧೮೬೨–೭೦), ಮೇಡ್ (೧೮೭೦–೭೫), ಸಾಂಡರ್ಸ್ (೧೮೭೫–೭೭) ಹಾಗೂ ಗಾರ್ಡನ್ (೧೮೭೮–೮೧)ರ ಆಡಳಿತವನ್ನು ವೀಕ್ಷಿಸಿತು. ಗುಂಜಾನರಸಿಂಹಸ್ವಾಮಿ ಗುಡಿ ಬಳಿ ಪ್ರಹ್ಲಾದ ಮಂಟಪವನ್ನು ಸೇವಕ ಜಗ್ಗುವಾಲಾನು ನಿರ್ಮಿಸಿದ್ದನ್ನು ೧೮೫೫ರ ಶಾಸನ ದಾಖಲಿಸಿದರೆ, ಇದೇ ತೇದಿಯಲ್ಲಿರುವ ವಿಜಯಪುರ ಶಾಸನದಿಂದ ಮುಮ್ಮಡಿ ಕೃಷ್ಣರಾಜರು ಪೂಜಿಸುತ್ತಿದ್ದ ಲಿಂಗವನ್ನು ಮೂಲಸ್ಥಾನದೇವರ ಉತ್ತರಭಾಗದಲ್ಲಿ ಪ್ರತಿಷ್ಠಾಪಿಸಿ ಪೂಜಾವಿಧಿಗೆಂದು ತಲಕಾಡು ತಾಲೂಕಿನ ವಿವಿಧ ಗ್ರಾಮಗಳಲ್ಲಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಕಮೀಷನರುಗಳ ಆಡಳಿತಾವಧಿಯಲ್ಲಿ ಬೆಂಗಳೂರು ಹಾಗೂ ವಿವಿಧ ಜಿಲ್ಲಾ ಕೇಂದ್ರಗಳ ನಡುವೆ ರಸ್ತೆ ಸಂಪರ್ಕ ಏರ್ಪಟ್ಟಿತು. ಭೂಸರ್ವೇಕ್ಷಣ ಕಾರ್ಯ ಕೈಗೊಳ್ಳಲಾಯಿತು. ಖಾನೇ ಸುಮಾರಿ ಜನಗಣತಿಯನ್ನು ೧೮೭೧ರಲ್ಲಿ ಆರಂಭಿಸಲಾಯಿತು. ಶಿಕ್ಷಣ–ಆರೋಗ್ಯಗಳ ಸುಧಾರಣೆಗೆ ಕ್ರಮ ಕೈಗೊಳ್ಳಲಾಯಿತು. ಆಡಳಿತದಲ್ಲಿ ಸುಧಾರಣೆ ತರಲಾಯಿತು. ಸಂಸ್ಥಾನವನ್ನು ಎಂಟು ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಆವರೆವಿಗೂ ಹೋಬಳಿಯಾಗಿದ್ದ ತಲಕಾಡು, ತಾಲೂಕಾಗಿ ಮೇಲ್ದರ್ಜೆಗೇರಿತು.

ಮುಂದೆ ೧೮೮೧ರಲ್ಲಿ ಹತ್ತನೆಯ ಚಾಮರಾಜ ಒಡೆಯರು (೧೮೮೧–೯೪) ಸಿಂಹಾಸನವನ್ನೇರಿದಾಗ ಬ್ರಿಟೀಷ್ ರೆಸಿಡೆಂಟರನ್ನು ನೇಮಿಸಲಾಯಿತು. ರಂಗಾಚಾರ್ಲು

ಅವರನ್ನು ದಿವಾನರನ್ನಾಗಿ (೧೮೮೧–೮೩) ನೇಮಿಸಲಾಯಿತು. ಇವರು ೧೮೮೧ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸುವ ಮೂಲಕ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ದಿಕ್ಸೂಚಿಯಾದರು. ಈ ಸಭೆಗೆ ಸಂಸ್ಥಾನದ ವಿವಿಧ ಭಾಗಗಳಿಂದ ಪ್ರತಿನಿಧಿಗಳನ್ನು ಆರಂಭದಲ್ಲಿ ನಾಮಕರಣ ಮಾಡಲಾಗುತ್ತಿದ್ದು, ಮುಂದೆ ಚುನಾವಣಾ ಪದ್ಧತಿ (೧೮೯೧) ಜಾರಿಗೆ ಬಂದಿತು. ಈ ಸಭೆಗೆ ತಾಲೂಕಿನಿಂದಲೂ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ಬನ್ನೂರಿನ ಅಪ್ಪುಗೌಡ ಹಾಗೂ ಸೋಸಲೆಯ ಜೋಡಿದಾರ್ ಶ್ರೀರಂಗಾಚಾರ್ ತಾಲೂಕನ್ನು ೧೮೮೧–೮೨ರಲ್ಲಿ ಪ್ರತಿನಿಧಿಸಿದ್ದರು. ತಾಲೂಕಿನ ಟಿ.ಪಿ. ಬೋರಯ್ಯ ಮಾಯಿಗಯ್ಯ, ಪುಟ್ಟಮಲ್ಲಪ್ಪ ಹಾಗೂ ಪಟೇಲ್ ಚಿಕ್ಕನೀಲೇಗೌಡ ೧೯೪೫–೪೯ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿದ್ದರು. ದಿವಾನ್ ಶೇಷಾದ್ರಿ ಅಯ್ಯರ್ (೧೮೮೩–೯೧) ಅವರ ದಿವಾನಗಿರಿ ಸಂದರ್ಭದಲ್ಲಿ ಹತ್ತನೆ ಚಾಮರಾಜ ಒಡೆಯರು ೧೮೯೪ರಲ್ಲಿ ಗತಿಸಿದಾಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರು (೧೮೯೪–೧೯೪೦) ಸಿಂಹಾಸನವನ್ನೇರಿದರು. ಆನಂತರದಲ್ಲಿ ಶಿವನಸಮುದ್ರ ಜಲವಿದ್ಯುತ್ ಉತ್ಪಾದನಾ ಕೇಂದ್ರವು (೧೯೦೨) ಪ್ರಾರಂಭಗೊಂಡಿತು. ಸಂಸ್ಥಾನದಲ್ಲಿ ಇಂದಿನ ವಿಧಾನಪರಿಷತ್ ಮಾದರಿಯಲ್ಲಿ ನ್ಯಾಯವಿಧಾಯಕ ಸಮಿತಿಯು ೧೯೦೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ನಾಲ್ವಡಿ ಕೃಷ್ಣರಾಜರ ಆಡಳಿತಾವಧಿಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್‌ರಂತಹವರು ದಿವಾನ ಹುದ್ದೆಯಲ್ಲಿದ್ದು, ಸಂಸ್ಥಾನದ ಅಭಿವೃದ್ಧಿಗಾಗಿ ಶ್ರಮಿಸಿದರು. ತತ್ಪರಿಣಾಮವಾಗಿ ಮಾದರಿ ಮೈಸೂರು ರಾಜ್ಯವು ರೂಪುಗೊಳ್ಳಲು ಸಾಧ್ಯವಾಯಿತು. ಈ ಅವಧಿಯಲ್ಲಿ ಅಗಸ್ತ್ಯೇಶ್ವರದೇವರ ಸೇವೆಗೆಂದು ದಾನಬಿಟ್ಟಿದ್ದನ್ನು ತಿರುಮಕೂಡಲಿನ ೧೯೨೮ರ ಶಿಲಾಲೇಖವೊಂದು ದಾಖಲಿಸಿದೆ. ತಿ.ನರಸೀಪುರ ಬಳಿ ಕಾವೇರಿ ಮತ್ತು ಕಪಿಲ ನದಿಗಳಿಗೆ ಕ್ರಮವಾಗಿ ೧೯೩೨ ಹಾಗೂ ೧೯೩೫ರಲ್ಲಿ ಸೇತುವೆಗಳು ನಿರ್ಮಾಣಗೊಂಡವು. ಕನ್ನಂಬಾಡಿ ಅಣೆಕಟ್ಟು ನಿರ್ಮಾಣಗೊಂಡು ನೀರಾವರಿ ಸೌಕರ್ಯವು ಸಂಸ್ಥಾನಕ್ಕೆ ಲಭಿಸುವಂತಾಯಿತು. ಮೈಸೂರರಸರು ಸಾಹಿತ್ಯ–ಸಂಗೀತ ಸಂಸ್ಕೃತಿಗಳ ಪೋಷಕರಾಗಿದ್ದು, ಆಸ್ಥಾನದಲ್ಲಿ ತಿರುಮಕೂಡಲಿನ ರಾಜನರ್ತಕಿ ನಾಟ್ಯಪ್ರವೀಣೆ ಸುಂದರಮ್ಮ ಹಾಗೂ ಅವರ ಮಗ ಪಿಟೀಲು ಚೌಡಯ್ಯರಂತಹ ಘನವಿದ್ವಾಂಸರಿದ್ದರು. ರಾಜಋಷಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ನಾಲ್ವಡಿಯವರು ೧೯೪೦ರಲ್ಲಿ ಗತಿಸಿದರು. ನಂತರ ಅಧಿಕಾರಕ್ಕೆ ಬಂದ ಜಯಚಾಮರಾಜೇಂದ್ರ ಒಡೆಯ (೧೯೪೦–೪೭)ರ ಆಡಳಿತಾವಧಿಯಲ್ಲಿ ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ವಿಲೀನವಾಯಿತು.

## ಸ್ವಾತಂತ್ರ್ಯ ಸಂಗ್ರಾಮ

ದೇಶದ ವಿವಿಧೆಡೆ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟವು ೧೯ನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ ಆರಂಭಗೊಂಡರೂ, ಅದು ಸಂಸ್ಥಾನದಲ್ಲಿ ಪ್ರಕಟಗೊಂಡಿದ್ದು, ಆ ಶತಮಾನದ ಅಂತ್ಯ ಭಾಗದಲ್ಲಿ, ಅದರಲ್ಲೂ ೧೯೦೬ರ ಸ್ವದೇಶಿ ಚಳವಳಿ ಸಂದರ್ಭದಲ್ಲಿ, ಅರಮನೆಯ ವಾರ್ಷಿಕ ವನಭೋಜನ



ಸಮಾರಂಭದಲ್ಲಿ ವಿದೇಶಿ ಸಕ್ಕರೆಯಿಂದ ತಯಾರಿಸಿದ್ದ ತಿನಿಸುಗಳನ್ನು ಬಿಸಾಡುವ ಮೂಲಕ ಇದು ಪ್ರಕಟವಾಯಿತು. ಆದರೆ ನಿಜವಾದ ಅರ್ಥದಲ್ಲಿ ಇದು ಆರಂಭಗೊಂಡುದು ಮೊದಲ ಜಾಗತಿಕ ಯುದ್ಧ ಸಮಯದಲ್ಲಿ. ಹಿಂದೂ ಧರ್ಮದ ವಿರುದ್ಧ ಕ್ರೈಸ್ತ ಧರ್ಮಿಯರು ನಡೆಸುತ್ತಿದ್ದ ವಾಗ್ದಾಳಿಯನ್ನು ವಿರೋಧಿಸಿ ಚಳವಳಿಯನ್ನು ಮೈಸೂರಿನಲ್ಲಿ ತಗಡೂರು ರಾಮಚಂದ್ರರಾಯರು ಆರಂಭಿಸಿದರು. ತಿಲಕರು ೧೯೨೦ರ ಆಗಸ್ಟ್ ಒಂದರಂದು ಗತಿಸಿದಾಗ ಮೈಸೂರಿನಲ್ಲಿ ಬೃಹತ್ ಮೆರವಣಿಗೆ ನಡೆದು ಅಂಗಡಿ ಮುಗ್ಗಟ್ಟುಗಳನ್ನು ಮುಚ್ಚಲಾಗಿತ್ತು. ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದಂತೆ ತಲಕಾಡು ಹಾಗೂ ಮುಡುಕುತೊರೆಯ ಜಾತ್ರೆಗಳಲ್ಲೂ ಹರಿಜನರ ಮೆರವಣಿಗೆಯನ್ನು ತಗಡೂರು ರಾಮಚಂದ್ರರಾಯರ ಮುಂದಾಳತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಕಣಿಯರ ಚಳವಳಿಯ ಅಂಗವಾಗಿ ೧೯೨೫ರಲ್ಲಿ ನರಸೀಪುರದ ನರಸಿಂಹಸ್ವಾಮಿ ಗುಡಿಗೆ ಪ್ರವೇಶ ಪಡೆಯಲೆಂದು ಕಣಿಯರು ಸಹಸ್ರಾರು ಸಂಖ್ಯೆಯಲ್ಲಿ ಸೇರಿದರಾದರೂ, ಕಡೆಗೆ ತೀರ್ಥಪ್ರಸಾದವನ್ನು ವಿತರಿಸುವುದರೊಂದಿಗೆ ಸಮಾಪ್ತಿಯಾಯಿತು. ಏತನ್ಮಧ್ಯೆ, ತಗಡೂರಿನಲ್ಲಿ ಖದ್ದಾರ್ ಸಹಕಾರಿ ಸಂಘವನ್ನು ತಗಡೂರರು ಆರಂಭಿಸಿದರು. (೧೯೨೫) ಮಹಾತ್ಮಗಾಂಧೀಜಿಯವರು ೧೯೨೭ರ ಆಗಸ್ಟ್‌ನಲ್ಲಿ ಮೈಸೂರಿಗೆ ಭೇಟಿ ನೀಡಿ ಖಾದಿ ಪ್ರಚಾರ ಕೈಗೊಂಡುದರ ಪರಿಣಾಮವಾಗಿ ನಂಜನಗೂಡು ತಾಲೂಕಿನ ಬದನವಾಳಿನಲ್ಲಿ ಖಾದಿ ಉತ್ಪಾದನಾ ಕೇಂದ್ರವನ್ನು ಸಂಸ್ಥಾನದ ಸರ್ಕಾರವು ಆರಂಭಿಸಿತು. ಈ ನಡುವೆ ತಾಲೂಕು ಮಟ್ಟದಲ್ಲಿ ಕಾಂಗ್ರೆಸ್ ಸಮಿತಿಗಳು ಆರಂಭಗೊಂಡಿದ್ದವು. ತಾಲೂಕಿನವರಾದ ಟಿ.ರಾಮರಾವ್, ಸಿದ್ದೋಜಿರಾವ್, ಟಿ.ಪಿ. ಬೋರಯ್ಯ ಹಾಗೂ ಸುಂದರ ತಾತಾಚಾರ್ಯರ ನಾಯಕತ್ವದಲ್ಲಿ ತಾಲೂಕಿನಲ್ಲಿ ಸ್ವಾತಂತ್ರ ಚಳವಳಿಗಳು ೧೯೩೦ರಿಂದ ಜರುಗಿದವು. ರಾಷ್ಟ್ರಮಟ್ಟದಲ್ಲಿ ೧೯೩೯ರಲ್ಲಿ ಜರುಗಿದ ಅಸಹಕಾರ ಚಳವಳಿಯಲ್ಲಿ ರಂಗಸಮುದ್ರದ ರೈತ ಬಿ.ಬೋರೇಗೌಡ ಹಾಗೂ ಸಿದ್ದೇಗೌಡ, ಬನ್ನೂರಿನ ಚನ್ನೇಗೌಡರು ಪಾಲ್ಗೊಂಡು ಆರು ತಿಂಗಳ ಕಾರಾಗೃಹ ಶಿಕ್ಷೆಗೂ ಗುರಿಯಾದರು.

ಬ್ರಿಟಿಷರ ವಿರುದ್ಧ ಭಾರತೀಯರು ನಡೆಸಿದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬನ್ನೂರಿನ ಚನ್ನೇಗೌಡ, ದಾಸೇಗೌಡ, ದೇವೇಗೌಡ, ಕೆಂಚೇಗೌಡ, ಕೃಷ್ಣಮೂರ್ತಿ ವಿ.ವಿ., ಬಿ.ವಿ.ಕೃಷ್ಣಪ್ಪ, ಬಿ.ಎಸ್.ಕೃಷ್ಣೋಜಿರಾವ್, ಕುಳ್ಳವೆಂಕಟಗೌಡ, ಲಕ್ಷ್ಮಯ್ಯ ಜಿ, ಲಿಂಗೇಗೌಡ, ಕೆ.ಲಿಂಗೇಗೌಡ, ಬಿ.ಎಲ್.ನಾಗೇಶರಾವ್, ಎಚ್.ಎಲ್.ನಾರಾಯಣ, ಕೆ.ಪಾಪಯ್ಯ, ಎಂ.ರಾಮಯ್ಯ, ಎಚ್.ರಾಮಲಿಂಗಯ್ಯ, ಎಸ್.ರಾಮು, ಬಿ.ಎಸ್. ಸಿದ್ದೇಗೌಡ, ಎನ್.ಸಿದ್ದೇಗೌಡ, ಬಿ.ಎನ್.ಶ್ರೀಕಂಠೇಗೌಡ, ಬಿ. ವೆಂಕಟರಮಣಯ್ಯ ಹಾಗೂ ಬಿ.ಎಸ್. ವೆಂಕಟರಮಣ; ನರಸೀಪುರದ ಟಿ.ಎನ್.ನಾಗರಾಜರಾವ್, ಸಿ.ಸಿದ್ದೋಜಿರಾವ್, ಡಿ.ನಂಜುಂಡಸ್ವಾಮಿ, ಪಿ. ನಂಜುಂಡಸ್ವಾಮಿ, ಕೆ.ರಾಮಶೆಟ್ಟಿ, ಎನ್.ಪಿ. ಷಣ್ಮುಖಸ್ವಾಮಿ, ಶ್ರೀರಂಗಪುರ ಅಗ್ರಹಾರದ ಸಿ. ನರಸಪ್ಪ, ಎನ್.ಪುಟ್ಟಹೊನ್ನಪ್ಪ, ಎನ್.ಎಸ್.ಶೇಷಾಚಲಯ್ಯ, ಅತ್ತಿಹಳ್ಳಿಯ ಟಿ.ರಾಮಲಿಂಗಪ್ಪ, ತಲಕಾಡಿನ ರಾಮರಾವ್ ಮುಂತಾದವರು ಭಾಗವಹಿಸುವ ಮೂಲಕ ತಾಲೂಕಿನ ಘನತೆಯನ್ನು ಎತ್ತಿಹಿಡಿದಿದ್ದು, ಇವರಲ್ಲಿ ಹೆಚ್ಚಿನವರು ಕಾರಾಗೃಹ

ಶಿಕ್ಷೆಗೆ ಗುರಿಯಾಗಿ ಬೆಂಗಳೂರಿನ ಕೇಂದ್ರ ಕಾರಾಗೃಹ ಹಾಗೂ ಶ್ರೀರಂಗಪಟ್ಟಣದಲ್ಲಿ ಸೆರೆಮನೆಯಲ್ಲಿ ಸೆರೆವಾಸವನ್ನನುಭವಿಸಿದರು.

ಆನಂತರ ೧೯೪೭ರಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಸಂಸ್ಥಾನದಲ್ಲಿ ಜರುಗಿದ 'ಮೈಸೂರು ಚಲೋ'ಚಳಚಳಿಯಲ್ಲಿ ಶಂಕರಿಕೊಪ್ಪದ ಬಸವಣ್ಣೆಯ್ಯ ಹಾಗೂ ಹನುಮಾನ್ ಬನ್ನೂರಿನ ದಾಸೇಗೌಡ (ಹೋಟೇಲು ಕಾರ್ಮಿಕ) ಕುಳ್ಳ ವೆಂಕಟಗೌಡ, ಬಿ.ಕೆ.ರಾಮು, ಜಿ.ಲಕ್ಷ್ಮಯ್ಯ, ಕೆ.ಪಾಪಯ್ಯ, ನರಸೀಪುರದ ಟಿ.ಎನ್.ನಾಗರಾಜರಾವ್, ಎನ್. ಪುಟ್ಟಹೊನ್ನಪ್ಪ, ಕೆ.ರಾಮಶೆಟ್ಟಿ, ಕೆ.ವೆಂಕಟಪ್ಪ, ಮುಂತಾದವರು ಮೈಸೂರಿಗೆ ಜಾಥಾ ತೆರಳಿ ಬಂಧನಕ್ಕೊಳಗಾದರು. ಕಡೆಗೂ ಈ ಚಳವಳಿಯು ಯಶಸ್ವಿಯಾಗಿ ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ವಿಲೀನಗೊಳ್ಳಲೊಪ್ಪಿ ಅಕ್ಟೋಬರ್ ೧೯೪೭ರಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪನೆಗೊಂಡಿತು.

## ಚುನಾವಣೆಗಳು

ಭಾರತ ಒಕ್ಕೂಟವು ರೂಪುಗೊಂಡ ನಂತರ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಮೊದಲ ಸಾರ್ವತ್ರಿಕ ಚುನಾವಣೆಗಳು ೧೯೫೨ರಲ್ಲಿ ಜರುಗಿದವು. ಆಗ ತಾಲೂಕಿನಲ್ಲಿ ಒಂದೇ ವಿಧಾನಸಭಾ ಸ್ಥಾನವಿತ್ತು. ಆದರೆ ೧೯೬೨ರಲ್ಲಿ ಇನ್ನೊಂದು ವಿಧಾನಸಭಾ ಕ್ಷೇತ್ರವು (ಬನ್ನೂರು) ತಾಲೂಕಿನಲ್ಲಿ ರೂಪುಗೊಂಡಿತು.

ಆಗ ಬನ್ನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ತಿ.ನರಸೀಪುರ ಹಾಗೂ ಮೂಗೂರು ಹೋಬಳಿಗಳನ್ನು ಹೊರತುಪಡಿಸಿ, ತಾಲೂಕಿನ ಇತರ ಪ್ರದೇಶಗಳ ಜೊತೆಗೆ ಮಳವಳ್ಳಿ ತಾಲೂಕಿನ ಕಿರುಗಾವಲು ಹೋಬಳಿಗೆ ಸೇರಿದ ದೇಶವಳ್ಳಿ ಹಾಗೂ ಬಂದರವಾಡಿ ಗ್ರಾಮಗಳು ಒಳಪಟ್ಟಿತ್ತು. ತಿ.ನರಸೀಪುರ ವಿಧಾನಸಭಾಕ್ಷೇತ್ರದ ವ್ಯಾಪ್ತಿಗೆ ನರಸೀಪುರ ತಾಲೂಕಿನ ಕಸಬಾ ಹಾಗೂ ಮೂಗೂರು ಹೋಬಳಿಗಳ ಜೊತೆಗೆ ನಂಜನಗೂಡು ತಾಲೂಕಿನ ಬಿಳಿಗೆರೆ ಹಾಗೂ ಛತ್ರ ಹೋಬಳಿಗಳು ಒಳಪಟ್ಟಿದ್ದು, ಇದನ್ನು ೧೯೭೮ರಲ್ಲಿ ಮೀಸಲು ಕ್ಷೇತ್ರವೆಂದು ಘೋಷಿಸಲಾಯಿತು.

೨೦೦೮ರ ಚುನಾವಣಾ ಕ್ಷೇತ್ರ ವಿಂಗಡಣೆ ಕಾಯ್ದೆಯನ್ವಯ ತಿ. ನರಸೀಪುರ ಕ್ಷೇತ್ರವಷ್ಟೇ ಉಳಿದು, ಬನ್ನೂರು ಕ್ಷೇತ್ರದ ಬನ್ನೂರು ವೃತ್ತ ಹಾಗೂ ಬನ್ನೂರು ಪಟ್ಟಣ ಪಂಚಾಯ್ತಿಯನ್ನು ಅದಕ್ಕೆ ಸೇರಿಸಲಾಗಿದೆ. ತಾಲೂಕಿನ ನರಸೀಪುರ ವೃತ್ತವನ್ನು "ವರುಣಾ ವಿಧಾನಸಭಾ" ಕ್ಷೇತ್ರಕ್ಕೆ ಸೇರಿಸಲಾಗಿದೆ. ಅದರಂತೆ ೨೦೦೮ರ ವಿಧಾನಸಭಾ ಚುನಾವಣೆಯಲ್ಲಿ ತಿ. ನರಸೀಪುರ ಕ್ಷೇತ್ರದಲ್ಲಿ ೧,೭೫,೫೩೩ (೮೯,೧೩೮ ಪು. ಹಾಗೂ ೮೬,೩೯೫ ಮ.) ಮತದಾರರಿದ್ದು. ಶೇ. ೬೭.೮೧ ಮತದಾನವಾಗಿತ್ತು.)

೨೦೦೮ರವರೆಗೆ ನಡೆದಿರುವ ವಿವಿಧ ವಿಧಾನಸಭಾ ಚುನಾವಣೆಗಳಲ್ಲಿ ತಾಲೂಕಿನಿಂದ ಆಯ್ಕೆಯಾಗಿರುವ ವಿಧಾನಸಭಾ ಸದಸ್ಯರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.



ಈ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಯ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ, ದ್ವಿತೀಯ, ಸ್ಥಾನಗಳಿಸಿದ ಪಕ್ಷ ಹಾಗೂ ಗಳಿಸಿದ ಮತಗಳನ್ನು ನೀಡಲಾಗಿದೆ. ಹೆಚ್ಚಿನ ವಿವರಗಳು ಬೆಂಗಳೂರಿನ ಚುನಾವಣಾ ಆಯುಕ್ತರ ಕಚೇರಿಯಲ್ಲಿ ಲಭಿಸುತ್ತದೆ.

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧ | ೨ | ೩ |
| ೧೯೫೨ ನರಸೀಪುರ | ಎಸ್.ಶ್ರೀನಿವಾಸ ಅಯ್ಯಂಗಾರ್ ಕರ್ನಾಟಕ ಮಜ್ದೂರ್ ಪ್ರಜಾಪಕ್ಷ ೧೦,೦೫೭ (೩೭.೬೯%) | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ೮.೬೦೭ (೩೨.೨೬%) |
| ೧೯೫೭ ತಿ.ನರಸೀಪುರ | ಎಂ.ರಾಜಶೇಖರ ಮೂರ್ತಿ (ಭಾ.ರಾ.ಕಾಂ) ೧೪,೦೨೮ (೫೫.೦೬%) | ಪ್ರಜಾಸಮಾಜವಾದಿ ಪಕ್ಷ ೧೧,೪೪೮ (೪೪.೯೪%) |
| ೧೯೬೨ ೧. ತಿ.ನರಸೀಪುರ | ಎಂ.ರಾಜಶೇಖರ ಮೂರ್ತಿ (ಭಾ.ರಾ.ಕಾ) ೧೫೪೬೯ (೪೭.೫೪%) | ಪ್ರ.ಸ.ಪ. ೧೨,೩೦೦ (೩೭.೮೦%) |
| ೨. ಬನ್ನೂರು | ಎಸ್.ಸಿದ್ಧಯ್ಯ (ಪ್ರ.ಸ.ಪ) ೧೩,೮೪೯ (೫೧.೦೭%) | ಭಾ.ರಾ.ಕಾ ೧೩,೨೬೮ (೪೮.೯೩) |
| ೧೯೬೭ ೧. ತಿ.ನರಸೀಪುರ | ಎಂ.ರಾಜಶೇಖರಮೂರ್ತಿ (ಭಾ.ರಾ.ಕಾಂ) ೨೧,೪೫೫ (೫೭.೫೩%) | ಭಾ.ರಾ.ಕಾಂ ೧೩,೩೩೯ (೩೫.೭೭%) |
| ೨. ಬನ್ನೂರು | ಟಿ.ಪಿ.ಬೋರಯ್ಯ (ಸ್ವ) ೧೬,೩೬೦ (೪೧.೮೯%) | ಭಾ.ರಾ.ಕಾಂ ೧೧,೯೫೦ (೩೦–೬೦%) |
| ೧೯೭೨ ೧. ತಿ.ನರಸೀಪುರ | ಎಂ.ರಾಜಶೇಖರಮೂರ್ತಿ (ಭಾ.ರಾ.ಕಾಂ) ೨೪,೦೦೨ (೫೩.೪೪%) | ಭಾ.ರಾ.ಕಾಂ ೧೩,೩೩೯ (೨೦,೧೭೮ (೪೪.೯೩%) |
| ೨. ಬನ್ನೂರು | ಕೆ.ಮಾದೇಗೌಡ (ರಾ.ಕಾಂ) ೨೧,೮೮೦ (೫೯.೩೩) | ಭಾ.ರಾ.ಕಾಂ ೨೦,೮೦೯ (೪೬.೯೨%) |
| ೧೯೭೮ ೧. ತಿ.ನರಸೀಪುರ | ಪಿ.ವೆಂಕಟರಮಣ (ಕಾಂಗೈ) ೨೮,೦೬೧ (೫೧.೭೯%) | ಜನತಾಪಕ್ಷ ೨೦,೩೩೪ (೩೭.೫೩%) |
| ೨. ಬನ್ನೂರು | ಕೆ.ಮಾದೇಗೌಡ (ಕಾಂಗೈ) ೨೬,೪೨೨ (೪೨.೨೦%) | ಜನತಾಪಕ್ಷ ೨೨,೩೦೭ (೩೫.೬೩) |
| ೧೯೮೩ ೧. ತಿ.ನರಸೀಪುರ (ಮೀಸಲು) | ವಾಸುದೇವ ವಿ (ಜನತಾಪಕ್ಷ) ೨೮,೮೧೭ (೫೩.೦೯%) | ಭಾ.ರಾ.ಕಾಂ ೧೮,೩೯೮ (೩೩.೮೯) |
| ೨. ಬನ್ನೂರು | ಟಿ.ಪಿ.ಬೋರಯ್ಯ (ಸ್ವತಂತ್ರ) ೩೦,೦೮೨ (೪೮.೧೭%) | ಭಾ.ರಾ.ಕಾಂ ೨೪,೯೫೭ (೩೮.೮೦) |

| | ೧ | ೨ | ೩ |
|---|---|---|---|
| ೧೯೮೫ | ೧. ತಿ.ನರಸೀಪುರ (ಮೀಸಲು) | ಎಚ್.ಸಿ.ಮಹಾದೇವಪ್ಪ (ಜನತಾ ಪಕ್ಷ) ೩೩,೯೫೪ (೫೫.೨೭%) | ಭಾ.ರಾ.ಕಾಂ ೨೪,೭೨೮ (೪೦.೨೫) |
| | ೨. ಬನ್ನೂರು | ಕೆ.ಜೆ.ರಾಮಸ್ವಾಮಿ (ಜನತಾಪಕ್ಷ) ೩೫,೬೫೬ (೫೦.೭೪%) | ಭಾ.ರಾ.ಕಾಂ ೨೮,೧೧೪ (೪೦.೦೧) |
| ೧೯೮೯ | ೧. ತಿ.ನರಸೀಪುರ | ಎಂ.ಶ್ರೀನಿವಾಸಯ್ಯ (ಭಾ.ರಾ.ಕಾಂ) ೩೮,೯೧೫ (೫೧.೨೦%) | ಜನತಾದಳ ೨೮,೪೯೧ (೩೭.೪೯%) |
| | ೨. ಬನ್ನೂರು | ಕೆ.ಎಸ್.ಚಿಕ್ಕಮಾದನಾಯಕ (ಭಾ.ರಾ.ಕಾ) ೩೪,೨೦೪ (೪೧.೫೦%) | ಜನತಾ (ಜೆ.ಪಿ) ೧೯,೧೩೭ (೨೩.೨೨) |
| ೧೯೯೪ | ೧. ತಿ.ನರಸೀಪುರ | ಎಚ್.ಸಿ.ಮಹಾದೇವಪ್ಪ (ಜನತಾದಳ) ೫೧,೮೭೪ (೫೮.೮೪) | ಭಾ.ರಾ.ಕಾಂ ೨೦,೬೧೫ (೨೩,೩೮) |
| | ೨. ಬನ್ನೂರು | ಎಸ್.ಕೃಷ್ಣಪ್ಪ (ಜನತಾದಳ) ೪೬,೯೯೨ (೪೮,೯೭) | ಭಾ.ರಾ.ಕಾಂ ೩೪,೩೯೮ (೩೫.೮೫) |
| ೧೯೯೯ | ೧. ತಿ.ನರಸೀಪುರ | ಡಾ.ಭಾರತಿಶಂಕರ್ (ಭಾ.ಜಪ) ೨೮,೮೫೮ (೩೪) | ಜನತಾದಳ (ಜಾ)೨೧,೩೭೨ (೨೫%) |
| | ೨. ಬನ್ನೂರು | ಕೆ.ಎಂ.ಚಿಕ್ಕಮಾದನಾಯಕ (ಭಾ.ರಾ.ಕಾಂ) ೪೫.೭೦೬ (೪೮) | ಜನತಾದಳ (ಜಾ) ೧೯,೦೬೦ (೨೦) |
| ೨೦೦೪ | ೧. ತಿ.ನರಸೀಪುರ (ಮೀಸಲು) | ಡಾ.ಎಚ್.ಸಿ.ಮಹಾದೇವಪ್ಪ (ಜನತಾದಳ (ಜಾ) ೩೭,೯೫೬ (೩೭.೬೧) | ಭಾ.ರಾ.ಕಾಂ ೨೩,೬೯೯ (೨೩.೪೮) |
| | ೨. ಬನ್ನೂರು | ಶ್ರೀಮತಿ ಜೆ.ಸುನೀತಾ ವೀರಪ್ಪಗೌಡ (ಭಾ.ಜ.ಪ) ೩೩,೫೨೨ (೩೪) | ಭಾ.ರಾ.ಕಾಂ ೨೭,೮೫೯ (೨೮.೨೬) |
| ೨೦೦೮ | ೧. ತಿ.ನರಸೀಪುರ (ಮೀಸಲು) | ಡಾ. ಎಚ್.ಸಿ.ಮಹಾದೇವಪ್ಪ (ಭಾರಾಕಾಂ) ೪೨,೫೯೩ (೩೬.೧೧) | ಜೆ.ಡಿ.ಎಸ್. ೨೮,೮೬೯ |
| | ೨. ವರುಣ* | ಸಿದ್ಧರಾಮಯ್ಯ (ಭಾರಾಕಾಂ) ೭೧,೯೦೮ (೫೦.೨೩) | ಭಾಜಪಾ ೫೩,೦೭೧ |

* ಈ ಕ್ಷೇತ್ರಕ್ಕೆ ತಾಲೂಕಿನ ನರಸೀಪುರ ವೃತ್ತವನ್ನು ಸೇರಿಸಲಾಗಿದೆ.



## ಚಾಮರಾಜನಗರ ಲೋಕಸಭಾ (ಮೀಸಲು) ಕ್ಷೇತ್ರದ *
## ಚುನಾವಣಾ ಫಲಿತಾಂಶ (೧೯೫೨–೨೦೦೪).

| ಚುನಾವಣಾ ವರ್ಷ | ಆಯ್ಕೆಯಾದ ಅಭ್ಯರ್ಥಿ, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|
| ೧೯೫೨ | ಎಂ.ಎಸ್.ಗುರುಪಾದಸ್ವಾಮಿ (ಕೆಎಂ.ಪಿಪಿ) ೧,೯೬,೧೭೫ (೨೭.೫೪) |
| ೧೯೫೭ | ಎಸ್.ಎಂ.ಸಿದ್ಧಯ್ಯ (ಎಸ್.ಸಿ.) ಭಾರಾಕಾಂ ೧,೮೬,೧೯೫ (೨೪.೬೫) |
| ೧೯೬೨ | ಎಸ್,ಎಂ.ಸಿದ್ಧಯ್ಯ (ಭಾರಾಕಾಂ) ೧,೧೭,೮೧೦ (೪೮.೪೭) |
| ೧೯೬೭ | ಎಸ್.ಎಂ.ಸಿದ್ಧಯ್ಯ (ಭಾರಾಕಾಂ) ೧,೦೮,೮೩೧ (೩೭.೨೩) |
| ೧೯೭೧ | ಎಸ್.ಎಂ.ಸಿದ್ಧಯ್ಯ (ಭಾರಾಕಾಂ) ೧,೬೮,೪೯೪ (೬೧.೯೪) |
| ೧೯೭೭ | ಬಿ.ರಾಚಯ್ಯ (ಭಾರಕಾಂ) ೨,೧೪,೨೩೩ (೫೫.೫೧) |
| ೧೯೮೦ | ವಿ.ಶ್ರೀನಿವಾಸಪ್ರಸಾದ್ (ಕಾಂಗ್ರೈ) ೨,೨೮,೭೪೮ (೫೮.೫೩) |
| ೧೯೮೪ | ವಿ.ಶ್ರೀನಿವಾಸಪ್ರಸಾದ್ (ಕಾಂಗ್ರೈ) ೨,೪೦,೬೬೫ (೫೩.೭೫) |
| ೧೯೮೯ | ವಿ.ಶ್ರೀನಿವಾಸಪ್ರಸಾದ್ (ಕಾಂಗ್ರೈ) ೩,೬೬,೯೨೨ (೫೫.೧೦) |
| ೧೯೯೧ | ವಿ.ಶ್ರೀನಿವಾಸಪ್ರಸಾದ್ (ಕಾಂಗ್ರೈ) ೨,೧೭,೭೩೫ (೩೨.೮೭) |
| ೧೯೯೬ | ಎ.ಸಿದ್ಧರಾಜು (ಜ.ದ) ೨,೧೪,೭೪೫ (೩೦.೭೭) |
| ೧೯೯೮ ** | ಎ.ಸಿದ್ಧರಾಜು (ಜ.ದ.) ೩,೪೦,೪೯೦ |
| ೧೯೯೯ | ವಿ.ಶ್ರೀನಿವಾಸಪ್ರಸಾದ್ (ಜ.ದ. (ಜಾ)) ೩,೧೧,೫೪೭ (೪೧) |
| ೨೦೦೪ | ಎಂ.ಶಿವಣ್ಣ (ಜ.ದ.(ಜಾ)) ೩,೧೬,೬೬೧ (೩೭.೧೧) |
| ೨೦೦೯ | ಆರ್. ಧ್ರುವನಾರಾಯಣ (ಭಾ.ರಾ.ಕಾಂ), ೩,೬೯,೯೭೦ (೩೮) |

* ಇದು ಆರಂಭದಲ್ಲಿ ಮೈಸೂರು ದ್ವಿದಸ್ಯ ಕ್ಷೇತ್ರದಲ್ಲಿ ಅಡಕವಾಗಿತ್ತು.

* ಇದು ಮೈಸೂರು ಜಿಲ್ಲೆಯ ತಿರುಮಕೂಡ್ಲು ನರಸೀಪುರ, ಬನ್ನೂರು, ನಂಜನಗೂಡು ಹಾಗೂ ಹೆಚ್.ಡಿ. ಕೋಟೆ ವಿಧಾನಸಭಾಕ್ಷೇತ್ರಗಳನ್ನು ಹಿಂದೆ ಒಳಗೊಂಡಿತ್ತು. ೨೦೦೮ರ ಕ್ಷೇತ್ರ ಪುನರ್ ವಿಂಗಡಣೆಯ ನಂತರವೂ ಟಿ. ನರಸೀಪುರ ತಾಲೂಕು ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲೇ ಮುಂದುವರಿದಿದೆ.

** ೧೯೯೭ರಲ್ಲಿ ಮೈಸೂರು ಜಿಲ್ಲೆಯು ವಿಭಜಿಸಲ್ಪಟ್ಟು, ಚಾಮರಾಜನಗರವು ಪ್ರತ್ಯೇಕ ಜಿಲ್ಲೆಯಾಯಿತು.